
# ತಿಂಗೊಳ್ ಬೊಲ್ಪು

•ಅರೆಬಾಸೆ ಪದ್ಯಗ



ಯೋಗೀಶ ಹೊಸೊಳಿಕೆ

ಕಿರಣ ರಂಗ ಅಧ್ಯಯನ ಸಂಸ್ಥೆ
ಗುತ್ತಿಗಾರು - 574218

## ಯೋಗೀಶ ಹೊಸೊಳಿಕೆ

**ಹುಟ್ಟೂರು:** ಬಂಟಮಲೆಯ ತಪ್ಪಲಿನಲ್ಲಿರುವ ಗುತ್ತಿಗಾರು ಗ್ರಾಮದ ವಳಲಂಬೆಯ ಹೊಸೊಳಿಕೆ ಕಟ್ಟೆಮನೆ.
**ಹೆತ್ತವರು:** ಹೊಸೊಳಿಕೆ ಸೀತಾರಾಮ ಗೌಡ ಮತ್ತು ನಾರಾಲು ಕುಸುಮಾವತಿ
**ವಿದ್ಯಾಭ್ಯಾಸ:** ವಳಲಂಬೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಗುತ್ತಿಗಾರು ಪದವಿ ಪೂರ್ವ ಕಾಲೇಜಿನಲ್ಲಿ ಪ್ರೌಢ ಶಿಕ್ಷಣ, ಸುಬ್ರಹ್ಮಣ್ಯದ ಎಸ್.ಎಸ್.ಪಿ.ಯು. ಕಾಲೇಜಿನಲ್ಲಿ ಎರಡು ವರ್ಷದ ವೃತ್ತಿಪರ ಶಿಕ್ಷಣ ಜೆ.ಓ.ಸಿ, ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನ ನಾಟಕ ಶಾಲೆ ರಂಗ ಅಧ್ಯಯನ ಕೇಂದ್ರದಲ್ಲಿ ನಾಟಕ ಡಿಪ್ಲೋಮಾ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಎ.
**ಪ್ರಕಟಿತ ಕೃತಿಗಳು:** ಅಗ್ನಿ ಗುಚ್ಛ (ಕವನ ಸಂಕಲನ–2017); ತಿಂಗೊಳ್ ಬೆಳ್ಕ್ (ಅರೆಭಾಷೆ ಕವನ ಸಂಕಲನ–2017); ಕಲರವ (ಸ್ಮರಣ ಸಂಚಿಕೆ–2011 ಉಪ ಸಂಪಾದಕರು )
**ಪ್ರಶಸ್ತಿ– ಪುರಸ್ಕಾರಗಳು:** ಬೀದರ್‍ನ ಜನಪ್ರಿಯ ಪ್ರಕಾಶನದ 'ಸಾಹಿತ್ಯ ಸಿರಿ' ರಾಜ್ಯ ಪ್ರಶಸ್ತಿ. ಪಿರಿಯಾಪಟ್ಟಣದ ಮನೆ ಮನೆ ಕವಿಗೋಷ್ಠಿ ಬಳಗದಿಂದ 'ಅದೃಷ್ಟವಂತ ಕವಿ' ಪುರಸ್ಕಾರ. ಕಲಾಮಾಯೆ ಸಾಂಸ್ಕೃತಿಕ ವಿದ್ಯಾ ಸಂಸ್ಥೆ (ರಿ) ಏನೆಕಲ್ ಇವರಿಂದ 'ಗುರುವಂದನಾ ಗೌರವ ಪುರಸ್ಕಾರ'. ಬೆಂಗಳೂರಿನ ಮಿತ್ರಸಂಗಮ ಫಿಲಂ ಇನ್‍ಸ್ಟ್ಯೂಟ್ ಇವರಿಂದ 'ಉತ್ತಮ ಅಭಿನಯ ಪ್ರಶಸ್ತಿ' ಮತ್ತು ಹತ್ತಾರು ಪುರಸ್ಕಾರಗಳು.
**ಸಾಹಿತ್ಯ ಚಟುವಟಿಕೆಗಳು:** ಸತತ ಮೂರು ಬಾರಿ ರಾಜ್ಯ ಮಟ್ಟದ ಕವನ ಸ್ಪರ್ಧೆಯಲ್ಲಿ ಕವನ ಆಯ್ಕೆಗೊಂಡು ಅನುರಕ್ತಿ, ಸ್ನೇಹದ ಬೆಸುಗೆಯಲ್ಲಿ ಸುಮಧುರ ಭಾವ, ಹಚ್ಚುತ್ತೇನೆ ದೀಪ ಕವನ ಸಂಕಲನದಲ್ಲಿ ಪ್ರಕಟ. ಮಡಿಕೇರಿ ಆಕಾಶವಾಣಿಯಲ್ಲಿ ಅರೆಭಾಷೆ ಕವನಗಳು ಮತ್ತು ಕತೆಗಳು ಪ್ರಸಾರಗೊಂಡಿವೆ. ನಾಡಿನ ದಿನ ಪತ್ರಿಕೆ, ವಾರಪತ್ರಿಕೆ, ಸ್ಮರಣ ಸಂಚಿಕೆಗಳಲ್ಲಿ ಕವನ ಲೇಖನ, ವ್ಯಕ್ತಿ ಚಿತ್ರಣ, ವಿಮರ್ಶೆ ಹೀಗೆ 100ಕ್ಕೂ ಅಧಿಕ ಬರಹ ಪ್ರಕಟಗೊಂಡಿವೆ. ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ 40ಕ್ಕೂ ಹೆಚ್ಚು ಕವಿಗೋಷ್ಠಿಗಳಲ್ಲಿ ಕವನ ವಾಚನ. ಕಾಸರಗೋಡು ಜಿಲ್ಲೆಯ ಎಡನೀರು ಮಠದಲ್ಲಿ ನಡೆದ ಅಂತರ ರಾಜ್ಯ ಚುಟುಕು ಗೋಷ್ಠಿಗೆ ಕರ್ನಾಟಕದಿಂದ ಆಯ್ಕೆ. ಚುಟುಕು ಕಿರಣ ಕೃತಿಯಲ್ಲಿ ಕವನ ಪ್ರಕಟ. ಸಾಹಿತ್ಯ ಸಂವಾದಗಳು, ಕವನ ಕಮಟಗಳು, ಸಾಹಿತ್ಯ ವಿಚಾರಗೋಷ್ಠಿ, ಚರ್ಚಾಕೂಟಗಳಲ್ಲಿ ಭಾಗವಹಿಸಿದ ಇವರು ಪತ್ರಕರ್ತರಾಗಿ ದುಡಿದಿದ್ದಾರೆ. 'ಅರೆಬಾಸೆ ಮುಡ್ಪು' ತಿಂಗಳ ಪತ್ರಿಕೆಯಲ್ಲಿ ನಮ್ಮೊಳಗಿನ ಸಾಧಕರ್ ಅಂಕಣ ಪ್ರಕಟಗೊಳ್ಳುತ್ತಿದೆ.
**ರಂಗ ಚಟುವಟಿಕೆಗಳು** : ಕಂಪ್ಯೂಟರ್ ಯುಗದಲ್ಲಿ ಕಳೆದು ಹೋಗುತ್ತಿರುವ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ರಾಜ್ಯದಲ್ಲಿ 50ಕ್ಕೂ ಅಧಿಕ ಮಕ್ಕಳ ಶಿಬಿರ ಆಯೋಜನೆ, ರಂಗ ನಿರ್ದೇಶನಕನಾಗಿ, ವಿನ್ಯಾಸಕಾರನಾಗಿ, ವಿವಿಧ ಕಾರ್ಯಾಗಾರಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ, ಅತಿಥಿಯಾಗಿ ಕಾರ್ಯಕ್ರಮ ನಿರ್ದೇಶಕರಾಗಿ 100ಕ್ಕೂ ಅಧಿಕ ಭಾಗವಹಿಸಿದ ಇವರು ರಂಗಶಿಕ್ಷಕರಾಗಿದ್ದಾರೆ.
**ಅಭಿನಯಿಸಿದ ಮುಖ್ಯ ನಾಟಕಗಳು:** ಮೀಡಿಯಾ, ಸತ್ಯ ಹರಿಶ್ಚಂದ್ರ, ಮಹಾಚೈತ್ರ, ಬಿರುವಂತೆಂಬರ ಗಂಡ, ಅಂಧಯುಗ, ವಿಧಿಲೀಲೆ...
**ನಿರ್ದೇಶಿಸಿದ ಮುಖ್ಯ ನಾಟಕಗಳು:** ನಾನೂ ಗಾಂಧಿ ಆಗುತ್ತೇನೆ, ಸತ್ಯ ಹರಿಶ್ಚಂದ್ರ, ಬುದ್ಧ ಹೇಳಿದ ಕಥೆ, ಬೆಳಕು ಹಂಚಿದ ಬಾಲಕ, ನಾಯಿ ತಿಪ್ಪ, ನಿಸರ್ಗವತಿ, ಧಗೆಯೇರಿದ ಧರಣಿ......
**ಟಿ.ವಿ.ಧಾರಾವಾಹಿಗಳು** : ಮತ್ತೆ ಬಂದ ವಸಂತ, ಆತ್ಮ ಸತ್ಕಾರ, ಮೇಘ ಮಂದಾರ, ಜೀವನ ಪಯಣ... ಆಕಾಶವಾಣಿಗಳಲ್ಲಿ ಇವರ ನಿರ್ದೇಶನದ ಕಾರ್ಯಕ್ರಮ ವೈವಿಧ್ಯಗಳು ಮೂಡಿಬಂದಿದೆ.
**ಸಂಘಟನೆ:** 2009ರಲ್ಲಿ ಗುತ್ತಿಗಾರಿನಲ್ಲಿ ಭಾವನಾ ಬಳಗ ಹುಟ್ಟು ಹಾಕಿ ಇವರ ಸ್ಥಾಪಕ, ಅಧ್ಯಕ್ಷತೆಯಲ್ಲಿ ಕಲೆ, ಸಾಹಿತ್ಯ, ಸಾಮಾಜಿಕವಾಗಿ ತೊಡಗಿಕೊಂಡರು. ಬಳಗ ಈಗಲೂ ಸಕ್ರಿಯವಾಗಿದ್ದು ಆಕಾಶವಾಣಿ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. ಈಗ ಬಳಗದ ನಿರ್ದೇಶಕರಾಗಿದ್ದಾರೆ.
ಇದೀಗ ಗುತ್ತಿಗಾರಿನಲ್ಲಿ 'ಕಿರಣ ರಂಗ ಅಧ್ಯಯನ ಸಂಸ್ಥೆ'ಯನ್ನು ಕಟ್ಟಿಕೊಂಡು ಇವರ ಅಧ್ಯಕ್ಷತೆಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಯ ಕೆಲಸದಲ್ಲಿ ಸಕ್ರೀಯರಾಗಿದ್ದಾರೆ. 'ಅಗ್ನಿಗುಚ್ಛ' ಕವನ ಸಂಕಲನ ಪ್ರಕಟಣೆ ಸಂಸ್ಥೆಯ ಮೊದಲ ಕಾಣಿಕೆ. ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಸದಸ್ಯರು ಮತ್ತು ಸುಳ್ಯ ಚಂದನ ಸಾಹಿತ್ಯ ವೇದಿಕೆ ಸದಸ್ಯರಾಗಿದ್ದಾರೆ. ವಳಲಂಬೆ ಶಾಲೆ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷರು.

ತಿಂಗೊಳ್ ಬೆಳ್ಕ್

# ತಿಂಗೊಳ್ ಬೆಳ್ಕ್

ಅರೆಬಾಸೆ ಪೊದ್ಯಗ

ಯೋಗೀಶ ಹೊಸೊಳಿಕೆ

ಕಿರಣ ರಂಗ ಅಧ್ಯಯನ ಸಂಸ್ಥೆ
ಗುತ್ತಿಗಾರು

ಶ್ರೀ. ಲಕ್ಷ್ಮೀನಾರಾಯಣ ಕಜೆಗದ್ದೆ, ಅಲ್ಲೂರ್ -

**THINGOL BELUK**
A collection of poems by
**Yogeesha Hosolike**
Guthigaru - 574 218
Dakshina Kannada, Karnataka
Mobile : 9449576632

Published by
**Kirana Ranga Adhyayana Samsthe**
Guthigaru - 574 218

First Impression : November 2017
© : Author
Paper used : 80 GSM Maplitho Size : Demy 1/8
Pages : 56 Price : Rs. 50

Cover Design : **Prasanna Irvanadu**
Pages Designed & Printed at
**AAKRITHI PRINTS**
Light House Hill Road
Mangaluru - 575 001
Tel. : 0824 2443002

**ತಿಂಗೊಳ್ ಬೆಳ್ಕ್**
ಅರೆಬಾಸೆ ಪೊದ್ಯಗ
**ಯೋಗೀಶ ಹೊಸೊಳಿಕೆ**

ಪ್ರಕಟಣೆ
**ಕಿರಣ ರಂಗ ಅಧ್ಯಯನ ಸಂಸ್ಥೆ**
ಗುತ್ತಿಗಾರು–574218, ದಕ್ಷಿಣ ಕನ್ನಡ
ದೂರವಾಣಿ : 9449576632


ಮೊದಲ ಮುದ್ರಣ : ನವೆಂಬರ್ 2017
ಹಕ್ಕುಗಳು : ಬರೆದವರದ್ದು
ಪುಟಗಳು : 56
ಬೆಲೆ : 50

ಮುಖಪುಟ ವಿನ್ಯಾಸ : **ಪ್ರಸನ್ನ ಐರ್ವನಾಡು**
ಪುಟ ವಿನ್ಯಾಸ ಮತ್ತು ಮುದ್ರಣ : **ಆಕೃತಿ ಪ್ರಿಂಟ್ಸ್**, ಮಂಗಳೂರು

ಅರ್ಪಣೆ

ಗುರುಕಾರ್ನೂರಿಗೆ

# ನೆನ್ಪು



**ಕುಂಞ್ಞಮ್ಮ ವೆಂಕಪ್ಪ ಗೌಡ**

ಮೂಕಮಲೆ ಮನೆತನದಲ್ಲಿ ಹುಟ್ಟಿ
ಹೊಸೊಳಿಕೆ ಕಟ್ಟೆ ಮನೆ ವೆಂಕಪ್ಪ ಗೌಡ್ರ ಮೊದುವೆ ಆಗಿ
ಸುಮಾರು ನೂರ ಹತ್ತ್ ವರ್ಷ ಬೊದ್ಕಿ ಮಣ್ಣುಲಿ ದುಡ್ದ್
ನಮ್ಮ ಬೆಳ್ಸಿ, ಆಡ್ಸಿ, ಜಾಗ್ರತೆ, ಬುದ್ದಿ, ಪಂಡ್‌ನ ಕತೆಗಳ ಹೇಳ್ದ್
ನೀವೂ ಸ್ವರ್ಗಲಿ ಒಳರಿ ನಿಮ್ಮ ನೆನ್ಪುಲಿ
ನಿಮ್ಮ ಪುಳ್ಳಿ.

**ಯೋಗೀಶ ಹೊಸೊಳಿಕೆ**

# ಪ್ರಾರ್ಥನೆ

ಸ್ವಾಮಿ...

ಸೀಮೆ ದೇವುರ, ಗ್ರಾಮ ದೇವುರ, ಊರು ದೇವುರ, ಕುಲ ದೇವುರ, ಹಂಗೇ ನಾನ್ನ ನಂಬುವ ಸತ್ಯದೇವತೆ ಕಲ್ಲುರ್ಟಿ ಮತ್ತೆ ದುರ್ಗನ ಮನ್ಸ್‌ಲ್ಲಿ ಆರಾದನೆ ಮಾಡಿಕಂಡ್, ಗುರುಹಿರಿಯರ ಆರ್ಶಿವಾದ ಪಡ್‌ಕಂಡ್

ನಾ ಬರ್ದ್ ಕಥನ ಕಾವ್ಯಗ, ನಿರೂಪಣೆಗ, ಪೊದ್ಯಗ, ಕವನಗಳ ಗಂಟ್ ಹಾಕಿ 'ತಿಂಗೊಳ್ ಬೆಳ್‌ಕ್' ಹೆಸ್ರಲಿ ಪುಸ್ತಕ ಮಾಡ್ತಾವ್ಪೊಳೊ.

ನನ್ನ ಅಪ್ಪ ಹೊಸೊಳಿಕೆ ಕಟ್ಟೆಮನೆ ದಿ। ಸೀತಾರಾಮ ಗೌಡ್ರು ವಿಚಾರ ಪಾಂಡಿತ್ಯ ಇದ್ದ ಮೊನ್ನಾ. ಅಪ್ಪನೊಟ್ಟಿಗೆ ವಿಷಯ ಚರ್ಚೆ ಮಾಡಿ ಇಂದ್ ತುಂಬಾ ಜನ ಬೆಳ್‌ದೊಳೊ, ಬೆಳ್ಸಿಳೊ ಇವರ ಯೋಚನೆಗಳೆಲ್ಲಾ ಕೆಲ್ಸ ರೂಪಕ್ಕೆ ಬತ್ತುಲೆ, ಆದರೆ ಒಳ್ಳ ಜನ ತೇವ್ವ ಮೊನ್ನಾರು ತುಂಬಾ ಒಳೊ ಅಪ್ಪ ವಸ್ತುನ ನೋಡ್ದು ಮತ್ತೆ ಮಾತ್ತಾಡ್ದುವ ರೀತಿ ನನ್ನೊಳಗೊ ಉಟ್ಟುಂತ್ತಾ ನಂಗೆ ಈಗೀಗಾ ತಿಳ್‌ದುಟ್ಟು.

ನಂಗೆ ಯಾಗ ಬರೆವ ಹುಚ್ಚು ಹತ್ತಿತ್ತೋ ಗೊತ್ತುಲೆ, ಬರೆತಾ ಒಳೆ. "ಹೆತ್ತ ತಾಯಿಗೆ ಹೆಗ್ಗಣ ಮುದ್ದು" ಹಾಂಗೆ ನನ್ನ ಪೊದ್ಯಗ ನಂಗೆ ಲಾಯಿಕ್. ಇದೀಗ "ತಿಂಗೊಳ್ ಬೆಳ್‌ಕ್" ನಿಮ್ಮ ಎದುರ್ ಉಟ್ಟು.

ನೀವುಗೆ ಇಷ್ಟ ಆದೇತಾ ನಂಬಿನೆ.

ನಾ ಇಲ್ಲಿ ಅವ್ವ, ಅಪ್ಪ, ತಮ್ಮ, ನನ್ನ ಅಕ್ಕ, ಹಿಂಗೆ ನಮ್ಮೊಳಗೆನ ಪದಗಳ ಬಳ್ಸಿಯೊಳೆ ಯಾಕೆಂತೇಳ್ರೆ ಬರೆಕನ ನಂಗೆ ಹಕ್ಕಲೆ ಆದೆ, ಓದುವ ನೀವುಗೆ ನಮ್ಮೊದೂಂತ ಆದೆ, ಹೊರತ್ ಇಲ್ಲಿನ ಕತೆಗ, ಮಾತ್‌ಗ ನನ್ನ ಕನ್ಸ್ ಮಾತ್ರ.

ನನ್ನ ಪದ್ಯಗ ಮಡಿಕೇರಿ ಆಕಾಶವಾಣಿಲಿ, ಪೇಪರ್‌ಗಳಲ್ಲಿ,

ಕವಿಗೊಷ್ಠಿಗಳ್‌ಲ್ಲಿ ಕೇಳಿ ಬೆನ್ನುತಟ್ಟಿ ಪ್ರೋತ್ಸಾಹಿಸಿದ ಹಿರಿ-ಕಿರಿ ಮನ್ಸ್‌ಗಳೇ ನನ್ನಬರ್ಸಿದ್. ನನ್ನೊಳಗೆನ ಬೇನೆ, ಸಂಕಟ ಕಳೆಕು ಬರವಣಿಗೆ, ಓದು ಉಪಕಾರ ಮಾಡಿಟ್ಟು. ನನ್ನ ಪುಸ್ತಕಕ್ಕೆ ಸುರುನ ಮಾತ್ ಬರ್‌ದ್ದು ಕೊಟ್ಟ ಸಾಹಿತಿ ವಿದ್ವಾನ್ ಟಿ.ಜಿ.ಮುಡೂರು ಅವರ ಹಿರಿತನಕ್ಕೆ ಕೈ ಮುಗ್ದನೆ. ಆಕಾಶವಾಣಿಯಲಿ ನನ್ನ ಪೊದ್ಯಗಳ ಪ್ರಸಾರ ಮಾಡಿ ಎರಡ್ ಮಾತ್ ಬರ್‌ದ್ ಕೊಟ್ಟ ಮಡಿಕೇರಿ ಆಕಾಶವಾಣಿನ ಸುಬ್ರಾಯ ಸಂಪಾಜೆಯವರ, ಚಿಂತನಶೀಲ ಬರಹಗಾರ ಎ.ಕೆ. ಹಿಮಕರಣ್ಣನ, ಅಕ್ಷರ ತಪ್ಪು ತಿಳಿ ಮಾಡ್ದ ರುದ್ರಚಾಮುಂಡಿ ಕುಶಾಲಪ್ಪ ಮಾಸ್ತರ ನೆನ್ಸಿಕಣೆ.

ಪ್ರತಿಭೆಗಳಿಗೆ ವೇದಿಕೆ ಸಿಕ್ಕಿರೆ ಬೆಳ್‌ದದ್ದೆಂತ ನಂಬಿದವ ನಾ, ಅರೆಬಾಸೆಲ್ಲಿ ಯುವ ಬರಹಗಾರರು ತುಂಬಾ ಜನ ಬರ್‌ದ್ದವೆ, ಬರ್‌ದ್ದೆಲ್ಲಾ ಸಾಹಿತ್ಯ ಆಗಲಿ, ಸಾಹಿತ್ಯ ದಾಖಲೆ ಆಗಲಿ, ಜನ ಮೆಚ್ಚಿ ಪ್ರೋತ್ಸಾಹಿಸುವಂಗೆ ದೈವ-ದೇವ್ರಗ ಅನುಗ್ರಹಿಸಲಿ.

ನಾ ಕಲಿತಾ ಇರುವ ಹೈದ. ಮಾಡ್ದ ಕೆಲ್ಸಲಿ, ಹೇಳ್ದ್ ಮಾತ್‌ಲಿ, ಬರ್‌ದ ಅಕ್ಷರಲಿ ತಪ್ಪುಗ ಇದ್ದಲ್ಲಿ ಕ್ಷಮೆ ಇರ್ಲಿ. ಮುಂದೆನ ತಪ್ಪುಗಳ ತಡೆ ಹಿಡ್ದ್ ಒಳ್ಳ ಕೆಲ್ಸಕ್ಕೆ ಬೆನ್ನೆಲುಬಾಗಿ ನಿಂತ್ ಬಾಸೆನೊಟ್ಟಿಗೆ ಕಲೆ, ಸಾಹಿತ್ಯ, ಸಂಸ್ಕೃತಿನ ಉಳ್ಸಿ ಬೆಳ್ಸೊಕುಂತ ಕೈ ಮುಗ್ದ್ ಪ್ರಾರ್ಥಿಸಿನೆ.

25-10-2017 **ಯೋಗೀಶ ಹೊಸೊಳಿಕೆ**

ಗುತ್ತಿಗಾರು

# ಸುರೂನ ಮಾತ್

'ತಿಂಗೊಳ್ ಬೆಳ್ಕ್' ಕವಿ ಯೋಗೀಶ ಹೊಸೊಳಿಕೆಯವು ಬರ್‌ದ ಕವಿತೆಗಳ ಕಂತೆ. ಅವು ಇದರ ನನ್ನ ಕೈಲಿರಿಸಿ ಪ್ರಕಾಶನಕ್ಕೆ ತಾವು ಇದ್ಕೆ ಮುನ್ನುಡಿನ ಬರ್‌ದ್ ಕೊಡೊಕುಂತ ಕೇಳಿ ಕೊಂಡೊಳೊ. ನನ್ನ ಕೃತಿಗಳ ನಾ ಹೊರತಾಕನ ಯಾರಂದಲೂ ಮುನ್ನುಡಿ ಬರೆಸುವ ಗೋಜಿಗೆ ಹೋತಿಲ್ಲೆ. ಆದರೆ ಯೋಗೀಶರಂತ ಕೆಲಮಂದಿ ಬಂದ್ ಕೇಳ್ಕನ ಬರೆಯೋಕಾದೆ. ಬರ್ದ್ದೆಳೆ. ತಿಂಗೊಳ್ ಬೆಳ್ಕ್‌ಲಿ ಚೆಲ್ಲಿದ ಮೂವತ್ತೆರ್‌ಡ್ ಪದ್ಯಗಳಲಿ ನನ್ನ ಮೆಚ್ಚುಗೆನ ಒಂದೆರಡ್ ಕವಿತೆಗಳ ಹೆಕ್ಕಿ ಗುರ್ತಿಸ್ತಾ ಒಳೆ.

ಇದರ ಎಲ್ಲಾ ಪದ್ಯಗಳ ಅರೆಬಾಸೆಲಿ ಬರ್‌ದ ಕವಿನೂ ಹುಟ್ಟು ಅರೆಬಾಸೆವು. ಇತ್ತೀಚೆಗಿನ ದಿನಗಳಲಿ ಅರೆಭಾಷೆಗಳಲಿ ಹೆಚ್ಚು ಕೃತಿಗ ಕಂಡು ಬಂದವೆ. ಹೆಚ್ಚಿನ ಓದು ಬರಹ ಕಲ್ತ ಕೊಡ್‌ಗ್ ಕನ್ನಡ ಜಿಲ್ಲೆಗಳ ಯುವಕ ಯುವತಿಯರ್ ಹೊಸ ಸಾಹಿತ್ಯದ ಕಡೆ ಮೊಕ ಮಾಡಿವೆ. ಅರೆಭಾಷೆಲಿ ಉಸಿರಾಡುವ ಭಾವ ಜೀವಿಗಕ್ಕೆ ಈ ಭಾಷೆಲಿ ಬರೆವುದು ಹೆಚ್ಚು ಸಲೀಸ್ ಆದೆ. ಈ ಭಾಷೆನ ನಾದ ಲಯಗ ವಸ್ತುಗೆ ಹೆಚ್ಚು ಬಲ ಕೊಟ್ಟವೆ. ಇಲ್ಲಿನ ಪದ್ಯಗಳಲಿ ಕೆಲ ಕವನಗ, ಕೆಲ ಹಾಡುಗ, ಅಭಿರುಚಿಗೆ ತಕ್ಕವು ಇವುಗಳ ಹಾಡಕ್, ಹಾಂಗೇ ಓದಕ್.

'ನೆಂಪಾದೆ ನಂಗೆ ಒಂದೊಂದೇ...' ಇದ್ ಈ ಸಂಕಲನ ಎಲ್ಲಾ ಓದಿ ಮುಗ್ಸಿದ ಮೇಲೆ ಕೆಲ ಹೊತ್ತ್ ನೆಂಪ್‌ಲಿ ಉಳಿವ ಕವನ. ಇಲ್ಲಿನ ಅವ್ವ–ಮಂಜ–ಮಂಜನ–ಮಂಜನ ಉದ್ಗಾರಗ. "ಓ ಮಕ್ಕಳೇ... ಹೊಡೆಬೋಡಿ ಲಾಗ ಮಾಡ್‌ಬೋಡಿ ರಗಳೆ ಅವ್ವನ ಮಾತ್ ಮಂಜಂಗೆ ನೆಂಪಾದೆ. ಆದರೆ ಈಗ ಅವ್ವಾ... ಕಾಲನೇ ಕೆಟ್ಟ್ ಹೋಗುಟ್ಟು. ದೂರದ ಪೇಟೆಲಿ ಕಲ್ತ ಮಂಜಂಗೆ ಅವ್ವ ಅಪ್ಪ ಜಾಗೆನ ಕೂಡಿಕೆ ಬಾದುಲ್ಲೆನಾ? ಅಂತ ಕೇಳ್ರೆ 'ಎಂತಕೆ ಬಾದು? ನಾ ಬಾದುಲ್ಲೆ. ನೀವುನು ಜಾಗೆ ಮಾರಿ ಇತ್ತ ಬನ್ನಿ' ಸತ್ತ್ ಸ್ವರ್ಗಲಿರುವ ಅವ್ವನ ಮಾತ್‌ಗ ಮಂಜಂಗೆ ನೆಂಪಾದೆ. ಕಲಿತ ಮಕ್ಕ ನಗರಲಿ ಹೆತ್ತವು ಹಳ್ಳಿಲಿ. ಈ ದಾರುಣ ಚಿತ್ರಣ ಇದ್ ಇಂದಿನ ನಾಗರಿಕತೆನ ತೋರ್ಸಿದೆ. ಈ ಕವನದ ಆರಂಭಲಿ ಬಾವ ಅವ್ವಾ ಸಂಬೋಧನೆ, ಚರಣಗಳ ಕೊನೆಗೆ ಬಾವ 'ನೆಂಪಾದೆ ನಂಗೆ ಒಂದೊಂದೇ...' ಅಂತ ಅನುರಣಿಸುವ ನುಡಿಗ ಕವನಕ್ಕೆ ಹೆಚ್ಚು ಬಲ ಕೊಟ್ಟವೆ. ಈ ಕವನಲಿ ಮಾತ್ರ ಅಲ್ಲ– ಕವಿ ಮನಸಲಿರುವ ಅಮ್ಮನ ಕತೆ', 'ಕಡೆ ಉಸುರು', 'ಮಂಜನ

ನೆಂಪು', 'ಅಕ್ಕನ ಮೊದುವೆ'ಗಳಲ್ಲಿ ಅವ್ವನ ನೆಂಪು ಸುತ್ತಿರುವುದರ ಕಾಣಕ್.

'ಅಂದ್ ಹುಣ್ಣಮೆ ಇರ್ಲ್' ಹೆಚ್ಚ್ ಮನಸಿಗೆ ನಾಟುವ ಇನ್ನೊಂದು ಕವನ. ಕೆಂಪಣ್ಣ ಚೋಮಕ್ಕರ ಸೋಗೆ ಮಡಲಿನ ಗುಡಿಸಲ ಬಡ ಸಂಸಾರ ಕಣ್ಣಿಗೆ ಕಟ್ಟಿದ ಹಾಂಗುಟ್ಟು. ಅಂದ್ ಹುಣ್ಣಮೆ ಇರ್ಲ್' ಈ ಕವನಲಿನ ಚರಣಗಳ ಅಂತ್ಯಲಿ ಅಂದ್ ಹುಣ್ಣಮೆ ಇರ್ಲ್ ಮತ್ತೆ ಮತ್ತೆ ಬಂದ್ ಕವಿತೆನ ಗುಣ ಹೆಚ್ಚಿಸಿದೆ. ಇರ್ಲ್ ತಿಂಗಳ ಬೆಳಕ್‌ನ ನಿದ್ದೆಲಿ ಕನ್ಸೊ ನನ್ಸೊಂತ ಬ್ರಮೆಲಿ ಗಂಡ್ ಹೆಣ್ಣ್ ಮರ್ದಿನ ಬೊಳ್ಪಿಗೆ ಮೊಕ ತೊಳೆಕೆ ಹೋಕನ ಬಚ್ಚಲ ಮಂಡೆ ಇಲ್ಲೆ.

ಇರ್ಲ್ ಕನ್ಸಿಲಿ ಯಾರೋ ಬಂದಾಂಗೆ ಆತ್ ಯಾ
ನಂಗೂ ಹಂಗೇ-ನಿಂಗೂ ಯಾಕೆ ನಿದ್ದೆ  ಹಾಳ್
ಮಾಡ್ದುದಾ ಹೇಳ್‌ತಿಲ್ಲೆಯಾ.
ನೀರಡಿ ಕೊಟಗೆಲಿ ಮಂಡೆನ ಯಾರೊ ಹೊತ್ತೊಳೊಯಾ
ನಿನ್ನದ್ ಕನ್ಸಲ್ಲ ನನ್ಸ್‌ಯಾ...
ಸುಟ್ಟೇ ಹೋಗಲಿ - ನೀ ಚಾಯ ಮಾಡ್ -
ಭಟ್ಟರ ಮನೆಲಿ ಅಡ್ಕೆ ಚೊಲ್ಲಿದರೆ ಹಿಂದಣ
ಸಾಲದೊಟ್ಟಿಗೆ ಭಟ್ರ್ ಮಂಡೆಗೂ ಸಾಲ ಕೊಡಿಕಿಲ್ಲೆಯಾ.

ರಾತ್ತಿ ಬಚ್ಚಲ ಹಂಡೆ ಕಳವಾದರೆ ಗಾಬರಿ ಆಗದ ಕೆಂಪಣ್ಣ ನಿರಾಳ ಮನ್ಸ. ಇಲ್ಲಿ ಇವರಿಬ್ಬರ ಮಾತ್‌ಗ ಮೊದ್ದು ಮೊದ್ದಾಗಿ ಓದುಗರಲ್ಲಿ ನಗೆ ಉಕ್ಕಿಸಿವೆ.

ಇದ್ ಅಲ್ಲದೆ ಇದರಲಿ ಇವರ ಇತರ ಕವನ ಹಾಡುಗ ಹಳ್ಳಿ ಬದುಕಿನ ಆಟ ಕೂಟ-ಬೇಟೆಗಳ ಮೊದುವೆಗೆ ಬಂದ ಹರೆಯದ ಹೃದ ಗೂಡೆಗಳ ಪ್ರೇಮ ಪ್ರಯಣ-ವಿರಹ ಶೃಂಗಾರಗಳ ಕಟ್ಟಿ ಕೊಟ್ಟವೆ. ಮಲೆನಾಡ ಮರಗಿಡ ಬೊಳ್ಳಿ ಹೂ ಹಣ್ಣ್ ಪ್ರಾಣಿ ಪಕ್ಷಿಗ ಮೀನ್ ಬೇಂಟೆ ನೇರ ಕಂಡಂತೆ ಆದೆ. ಹಳ್ಳಿನ ಕೃಷಿ ಕಾರ್ಯಲಿ ಒಟ್ಟಾಗಿ ದುಡಿವ ಗುಂಪಾಗಿ ನಲಿವಕಲಿವ, ಕೂಟ ಹಬ್ಬಗಳಲ್ಲಿ ಪ್ರದರ್ಶನ ಮಾಡಿಕೆ ಹಾಡುಗ ಇದಲ್ಲಿ ಸಾಕಷ್ಟು ಉಟ್ಟು. ಹಿತವಾದ ಜತೆ ಸಾಮಾಜಿಕ ಸಮತಾವಾದದ ನಾಯಕರ್-ರೈತರ್ ಎದುರಾದವೆ. ಹೀಂಗೆ ಕಾವ್ಯ ಮಜಲಲಿ ಕವಿ ಹಾಕಿದ ಕೆಲ ಹೆಜ್ಜೆ ಗುರುತ್ತುಗಳ ಕಾಣಕ್.

"ಪ್ರತಿಭಾನಾಂ ಕಾವ್ಯ ವಿದ್ಯಾಪ್ರಚಯ ಪರಿಚಯಂ-ವೃದ್ಧ ಸೇವಾನುರಾಗಂ-ಸತತಾಭ್ಯಾಸಂ-ಕವಿತೆಗೆ ನಿಯತ ಕಾರಣಂ" ಅಂತ ಪ್ರಾಜ್ಞರ್ ಹೇಳಿವೆ.

ಯೋಗೀಶರಲ್ಲಿ ಮೂಲ ಪ್ರತಿಭೆ ಉಟ್ಟು. ಹೆಚ್ಚಿನ ಕಾವ್ಯಗಳ ಓದ್, ಹಿರಿಯ ಸಾಹಿತಿಗಳ ಒಡನಾಟ, ಸತತಾಭ್ಯಾಸಂದ ಸಾಹಿತ್ಯ ಕ್ಷೇತ್ರಲಿ ಇವು ಮುಂದೆ ಬರಲಿಂತ ಮನ ತುಂಬಿ ಹಾರೈಸಿನೆ.

25-10-2017 | **ವಿದ್ವಾನ್.ಟಿ.ಜಿ. ಮುಡೂರು**

ಪಂಜ

# ಎರಡು ಮಾತು

ಮಿತ್ರ ಯೋಗೀಶ್ ಹೊಸೊಳಿಕೆ ಅವರ 'ತಿಂಗೊಳ್ ಬೆಳ್ಕ್' ಕವನ ಸಂಕಲನದ ಬಗ್ಗೆ ಎರಡು ಮಾತು ಬರೆಯಲು ಹೆಮ್ಮೆ ಪಡುತ್ತೇನೆ. ಯೋಗೀಶ್ ನನಗೆ ರೇಡಿಯೋ ಕೇಳುಗರಾಗಿ ಹತ್ತಿರವಾದವರು. ಗುತ್ತಿಗಾರಿನಿಂದ ದೂರದ ಮಡಿಕೇರಿ ಆಕಾಶವಾಣಿಗೆ ಬಂದು ಅವರು ಅರೆಭಾಷೆ ಕಾರ್ಯಕ್ರಮ ಕೊಟ್ಟವರು, ಕವಿತೆಗಳನ್ನು ಓದಿದವರು. ಅವರೊಳಗೊಬ್ಬ ಉತ್ತಮ ಕವಿಯಿದ್ದಾನೆ. ವಾಸ್ತವವಾದೀ ಚಿಂತಕನಿದ್ದಾನೆ. ಇಲ್ಲಿಯ ಕವನಗಳಲ್ಲಿ ಅದು ನಿಚ್ಚಳವಾಗಿ ಕಾಣಿಸಿದೆ. ಕವನಗಳನ್ನು ಓದುತ್ತ ಹೋದಂತೆ ಸುಳ್ಯ ಪರಿಸರದ ಗದ್ದೆ, ತೋಟ, ಬಯಲು, ಗುಡ್ಡ, ಪಕ್ಷಿಸಂಕುಲ, ಮದುವೆ, ಸಂಪ್ರದಾಯ, ನಂಬಿಕೆ, ಆಧುನಿಕತೆ ಉಂಟು ಮಾಡಿರುವ ಪಲ್ಲಟ–ಹೀಗೆ ಇಡೀ ಬದುಕಿನ ಗಂಧ ಘಮಘಮಿಸುತ್ತ ಮನಸ್ಸು ಪುಳಕಗೊಳ್ಳುತ್ತದೆ. ಕೆಲವೊಮ್ಮೆ ಮರುಕಪಡುತ್ತದೆ. ಕೃಷಿ ಬದುಕಿನ ಜೊತೆ ಕವಿ ಬೆಳೆಸಿಕೊಂಡ ಅವಿನಾಭಾವಸಂಬಂಧ ಇಲ್ಲಿಯ ಸಂವೇದನೆಗಳ ಮುಖ್ಯ ನೆಲೆ.

ಕವನಗಳನ್ನು ಓದುತ್ತಾ ಹೋದಂತೆ ಯೋಗೀಶರು ಲಯಬದ್ಧವಾಗಿ ಯಾಕೆ ಬರೆಯಲಿಲ್ಲ ಎಂಬ ಪ್ರಶ್ನೆ ನನ್ನನ್ನು ಕಾಡಿತು. ಜನತೆಯ ನಾಲಗೆಯಲ್ಲಿ ಉಳಿಯಲು ಕವಿತೆಗೆ ಲಯಬೇಕು. ಯೋಗೀಶರು ಇದನ್ನು ಸಾಧಿಸಬಲ್ಲರು ಎನ್ನುವುದಕ್ಕೆ ಈ ಸಂಕಲನದ 'ಮೊದುವೆ ಮನೇಲಿ' ಕವನ ಸಾಕ್ಷಿ. ನನ್ನ ಅನುಭವ ಮತ್ತು ಅನಿಸಿಕೆಯೊಂದನ್ನು ಇಲ್ಲಿ ಹಂಚಿಕೊಳ್ಳಬೇಕೆನಿಸುತ್ತದೆ.

ಮಡಿಕೇರಿ ಆಕಾಶವಾಣಿ ಭಕ್ತಿಗೀತೆಗಳನ್ನು ಧ್ವನಿಮುದ್ರಿಸಲು ಕವಿಗಳಿಂದ ಅರೆಭಾಷೆ ಗೀತೆಗಳನ್ನು ಆಹ್ವಾನಿಸಲಾಯಿತು. ನೂರಾರು ಭಕ್ತಿ ರಚನೆಗಳು ಕೈ ಸೇರಿದುವು. ಆದರೆ ಗಾಯನಕ್ಕೆ ಬೇಕಾದ ಲಯ ಅಲ್ಲಿಲ್ಲ! ಯಾಕೆ ಹೀಗೆ ಎಂಬ ಪ್ರಶ್ನೆ ನನ್ನನ್ನು ಕಾಡಿತು. ಕೃಷಿ ಬದುಕಿಗೆ ಅಂಟಿಕೊಂಡ ಅರೆಭಾಷಿಕರಿಗೆ ಸಂಗೀತ ಮತ್ತು ಲಯಜ್ಞಾನ ಯಾಕೆ ಒಲಿಯಲಿಲ್ಲ? ಕುಯಿಂತೋಡು ದಾಮೋದರ, ಯಶವಂತ ಕುಡೆಕಲ್ಲು, ಕರುಣಾಕರ ನಿಡಿಂಜಿ ಇವರ ಕವಿತೆಗಳು ಮಾತ್ರ ನನ್ನ ಈ ಮಾತಿಗೆ ಅಪವಾದ. ಇಡೀ ಜನಾಂಗದಲ್ಲಿ ಈ ಕೊರತೆ ಇದೆ ಎಂದೇ ನನಗನ್ನಿಸಿದೆ. ಎಲ್ಲರೂ ತಾಳಬದ್ಧ ರಚನೆಗಳನ್ನು ಮಾಡಲಾರರು, ಮಾಡಬೇಕಾಗಿಯೂ ಇಲ್ಲ. ಆದರೂ ಮುಂದೆ ಅರೆಭಾಷಿಕ ಕವಿಗಳು ಈ ನನ್ನ ಸಂದೇಹವನ್ನು ಸುಳ್ಳಾಗಿಸಬೇಕೆಂದು ನನ್ನ ಪ್ರಾರ್ಥನೆ.

ಯೋಗೀಶ್ ಹೊಸೊಳಿಕೆಯವರಿಗೆ ಸರ್ವ ಶ್ರೇಯಸ್ಸನ್ನು ಹಾರೈಸುವೆ.

25–10–2017 **ಸುಬ್ರಾಯ ಸಂಪಾಜೆ**
ಸಂಪಾಜೆ ಆಕಾಶವಾಣಿ ಮಡಿಕೇರಿ

# ತಿಂಗೊಳ್ ಬೆಳ್‌ಕ್‌ಲಿ

ನಾ ಸುಮಾರ್ ಎಲಿಮೆಂಟ್ರಿ ಶಾಲೆಲಿ ಇರುವ ಕಾಲಲಿ 'ಮೋಟೆಗೂಡೆನ ಮೊದುವೆ' ಅಂತೇಳುವ ಪದ್ಯ ಕೇಳಿದ್ದೆ. ಹಸಿಗೋಡೆಗೆ ಕಲ್ಲ್ ಹೊಡ್ತ ಹಂಗೆ ಅಂಟಿಕಂಬ ರೀತಿನ ಪದ್ಯ ಅದ್. ಆ ಪದ್ಯನ ಬರ್ದವು ಹೊದ್ದೆಟ್ಟಿ ಭವನ್ನಿಣ್ಣಾಂತ ಗೊತ್ತಾಗಿ ಹೆಚ್ಚಿ ವರ್ಸ ಆತ್ಲೆ. ಅವರ ಬುಟ್ರೆ ಕುಡೆಕಲ್ಲ್ ಯಶವಂತನೇ ಸೈ. ಇವನ ಪದ್ಯಗಳ ಓದ್‌ಕನ ಅದರ್ಲಿ ಜೀವಕಳೆ ಉಟ್ಟೂಂತ ಅನ್ಸಿತ್. ಹಾಂಗೆ ನಾವು ಅದರ ಬಂಟಮಲೆ ಪ್ರಕಾಶನ ಬ್ಯಾನರ್‌ಲಿ ಪ್ರಿಂಟ್ ಮಾಡ್ಸಿದ್ದೊ, ತೊಂಬರ ಹೆಸ್ರ್‌ನ ಆ ಪದ್ಯ ಪುಸ್ತಕದ ಒಂದು ಸಾವಿರ ಪ್ರತಿ ಒಂದೇ ದಿನ ಮಾರಾಟ ಆದ್ದ್ ದಾಖಲೆನೇ ಸೈ. ಇಂತಹ ಪದ್ಯಗಳ್ಲಿ ನವೋದಯ ನವ್ಯ, ಪ್ರಗತಿಶೀಲ, ಬಂಡಾಯಂತ ಕಾಂಬೊದುಲೆ ಮತ್ತೆ ಅರೆಭಾಷೆಯವರ ಮಾತುನ ಸ್ವರ, ಲಯ, ರಾಗ, ಸಾಂಸ್ಕೃತಿಕ ಪ್ರತಿಮೆಗೆ, ಉಪಮೆ, ಉದಾಹರಣೆಗ ಅದರ ಮೂಲ ಸುರ್ಪಲೇ ಕಂಡದೆ. ಅದರ ಮೊಣ್ಣುನ ಮೂರಿಂತಳೋ, ಮೊಣ್ಣುನ ಗುಣಂತಳೋ ಹೇಳಕ್. ಅಂತಹ ಪದ್ಯಗಳ ಕೇಳ್‌ಕನ –ಹಾಂ! ಇದ್ ನಮ್ಮೊದ್‌ಂತ ಅನ್ಸಿದೆ. ಈಗೀಗ ಅರೆಭಾಸೆಲಿ ಬರ್‍ಯೊವು ತುಂಬಾ ಒಳೊ. ಈ ಪೈಕಿ ನಮ್ಮ ಯೋಗೀಶನೂ ಒಬ್ಬ ಅಂವ ಬರ್ದ ಅರೆಭಾಸೆ ಪದ್ಯಗಳ ಪೈಕಿ ಕೆಲವು ನಾ ಮೇಲೆ ಹೇಳ್ದ ರೀತಿಲಿ ಇದ್ದಾಂಗೆ ಕಂಡದೆ. ಯೋಗೀಶಂಗೂ ಬರೈವ ಸೆಲೆ ಸಿಕ್ಕಿದಾಂಗುಟ್ಟು. ಪದ್ಯದ ವಸ್ತು ಆಯ್ಕೆ ಪ್ರತಿಮೆ ಉಪಮೆಯಲಿ ಎದ್ದು ಕಾಂಬೊದೇ ಆ ಭಾಷೆ ಮಾತಾಡುವವರ ಸಂಸ್ಕೃತಿ ವಿಚಾರಗ.

ಯೋಗೀಶ ಒಳ್ಳ ಯೋಚನೆ– ಚಿಂತನೆ ಇಸಿಕಂಡಿರುವ ಹೈದ. ನಮ್ಮ ಗೌಡ ಜಾತಿಲಿ ಕೂಜುಗೋಡು ಕಟ್ಟೆಮನೆ, ಬಲ್ನಾಡ್ ಕಟ್ಟೆ ಮನೆಂತ ಇರುದು ನೀವುಗೆ ಗೊತ್ತಟ್ಟು. ಹಂಗೇನೆ ಹೆಚ್ಚಿ ಪ್ರಚಾರಲಿ ಇಲ್ಲದ ಹೊಸೊಳಿಕೆ ಕಟ್ಟೆಮನೆ ಗುತ್ತಿಗಾರ್ ಗ್ರಾಮದೊಳಗೆ ಉಟ್ಟು. ಇದೇ ಮನೆತನಕ್ಕೆ ಸೇರ್ದ ಯೋಗೀಶ ಹೊಸೊಳಿಕೆ ಸೀತಾರಾಮ ಗೌಡ್ರ ಮಂಜ. ಕೋಲೇಜ್ ಮೆಟ್ಲ್ ಹತ್ತಿ ದೂರದ ಕುಂದಾಪುರಲಿ ರಂಗ ಶಿಕ್ಷಣ ಡಿಗ್ರಿ ಮಾಡಿ ನಾಟಕ, ಪದ್ಯ, ಸಿನಿಮಾ, ದಾರವಾಹೀಂತ ಓಡಾಡಿ ತುಂಬಾ ಸಣ್ಣ ಪ್ರಾಯಲೇ ಹೆಸರ್ ಮಾಡ್ದ ಹೈದ.

ದೂರ ದೂರಕೆ ಪೇಪರ್‌ಲಿ ಪ್ರಿಂಟಾಗಿ ಯೋಗೀಶನ ಪದ್ಯಗ ಬರ್ತಿದ್ದೊ ಅಲ್ಲಲ್ಲಿ ಸಭೆಗಳ್ಲಿ ಪದ್ಯ ಓದ್‌ತಿತ್ತ್. ಅದೇನಿದ್ದೂ ಈಗ ಬರಾಬ್ಬರಿ 32 ಪದ್ಯಗಳಿಗೆ ಗಂಟ್ ಹಾಕಿ

ದೊಡ್ಡ ಪುಸ್ತಕನೇ ರಡಿಯಾಗುಟ್ಟು. ಓದೊವುಕೆ ನೆಗೆ ಉಟ್ಟು, ಖುಷಿ ಉಟ್ಟು, ಕೆಲವು ಸಂಗತಿ ಓದ್‌ಕನ ಸಂಕಟನೂ ಆದೆ, ಬೇನೆ ಬೇಜಾರೂ ಆದೆ. ಒಳಗೆನ ವಿಷಯಗಳೂ ಹಾಂಗುಟ್ಟು. ತಲೆಗೆ ಹೊಕ್ಕರೆ ತಲೆ ಕೆಡ್ಸಿಕೆನೂ ಉಟ್ಟು, ಗಾದೆ ಮಾತು, ನೀತಿ ಮಾತ್, ಹಳಬರ ರಾಗ, ಗೂಡೆನ ಮೋಡಿ, ತುಂಟಾಟ, ಜೀವನ ಸತ್ಯಗ ಎಲ್ಲೊವೂ ಸೇರ್ದ ಸಂಗತಿಗ ಒಳಗೆ ಕಂಡವೆ.

ಕನ್ನಡ ಅಥವಾ ಗ್ರಂಥ ಕನ್ನಡಲಿ ಬರ್ದ ಇವರ ಪದ್ಯಗಳಿಗೆ ಹೋಲಿಸಿದರೆ ಇಲ್ಲಿರುವ ಪದ್ಯ ಬಾರಿ ಉದ್ದುದ್ದ ಉಟ್ಟು ಕಥನ ಕಾವ್ಯದ ಹಾಂಗೆ. ಎಲ್ಲಾ ಕಡೆ ಅಲ್ಲದಿದ್ದರೂ ಪ್ರಾಸ ಲ್ಯಾಕುಟ್ಟು. ಲಾವಣಿ ರೀತಿಯ ಘಟನಾವಳಿಗಳ ನಿರೂಪಣೆ (ನರೇಶನ್) ಲ್ಯಾಕುಟ್ಟು, ಸಂಗತಿಗ ಹಳ್ಳಿ ಊರುನ, ಕಾಡ್ ಗುಡ್ಡೆಗಳ ನೊಡುಲಿ ಇರುವ ಕೃಷಿ ಮೂಲದ ಹಳ್ಳಿ ಮನೆಯ ಸುತ್ತ ಇರುವ ಜನ ಜೀವನದ ಸುರ್ಪ ಕಂಡದೆ. ಪ್ರೀತಿ, ಕನಿಕರ, ಮಮತೆ, ಮನುಷ್ಯತ್ವ, ಎದ್ದ್ ಕಂಡದೆ.

ಒಟ್ರಾಸಿಲಿ ಹೇಳ್ದಾದರೆ ಕವಿಯ ಮನ್ಸ್, ಜೀವನದ ಮೌಲ್ಯ ಜನಪರವಾಗಿ ತೋರಿದೆ. ಯೋಗೀಶ ಮೊಳ್ದ ಸಂಗತಿಗಳ್‌ದ ಅರೆಬಾಸೆಲಿ ಹೆಚ್ಚ್ ಸಮರ್ಥ ಅಂತ ಕಂಡದೆ. ತುಂಬಾ ನಿರೀಕ್ಷೆ ಹುಟ್ಟುವ ಹಾಂಗುಟ್ಟು.

ಕಟ್ಟೆ ಮನೆ ದೈವಗ ಖಂಡಿತಾ ಒಳ್ಳೆದ್ ಮಾಡಿವೆ.

ಒಳ್ಳೆ ದಾಗಲಿಂತ ಹೇಳುವ,

25-10-2017

**ಎ.ಕೆ. ಹಿಮಕರ**
ಮಾಜಿ ಅಧ್ಯಕ್ಷರು
ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು

# ಪುಟನೋಟ


1. ನೆನ್ಪಾದೆ ನಂಗೆ ಒಂದೊಂದೇ... / 1
2. ಅಂದ್ ಹುಣ್ಣಮೆ ಇರ್ಲ್ / 3
3. ರೈತರ ಕೂಂಗೂ / 5
4. ಮೊದುವೆ ಮನೇಲಿ / 6
5. ಮರೆಕಾಗದ್ / 7
6. ಅಮ್ಮನ ಕಥೆ / 8
7. ಗಾಳದ ಮೊರ್ಲು / 10
8. ಕಡೇ ಉಸುರು / 12
9. ಏನ್ ಹೇಳ್ರೆ ಸಣಪಾ...? / 14
10. ಪೋಯಿಯ ಬಾವ / 15
11. ಗೂಡೆ ಹುಚ್ಚು / 16
12. ಮೊಣ್ಣುನ ಬೊದುಕು / 17
13. ಪ್ರೀತಿ ಇಲ್ಲದ ಗೂಡೆ / 19
14. ಅತ್ತೆ ಮಗಳೆ ಅಮ್ಮಿ / 20
15. ಮಂಜನ ನೆನ್ಪು / 21
16. ಇವ ನನ್ನ ತಮ್ಮ / 22
17. ಗೂಡೆನ ಬೇಟೆ / 23
18. ಮೆತ್ತನೆ ಮಾತ್ಗ / 24
19. ನನ್ನ ಕನ್ಸ್‌ನ ಗೂಡೆ / 25
20. ನಾ ಸ್ವಾರ್ಥಿನಾ...? / 26
21. ಗೂಡೆನ ನೆನ್ಪು / 27
22. ಅಕ್ಕನ ಮೊದುವೆಲಿ / 28
23. ಮೊನ್ಸಾನ ಮನ್ಸ್ / 30
24. ಹಳ್ಳಿ ಹೈದ ಶಾಲೆಗೆ ಹೋಗಿ ಬಾಕನ /
25. ಮೊದು ಮಂಜ / 33
26. ಕಾಡ್ ಮನ್ಸ್ / 34
27. ಬುಟ್ಟು ಹೋದವನ ನೆನ್ಪುಲಿ / 3
28. ಊರು ಗೌಡ / 36
29. ಸುರೂನ ಜಡಿಕುಟ ಮಳೆ / 3
30. ನಾಯಕರ್ / 38
31. ಹೆಸುರ್ ಉಸುರ್ / 39
32. ಸ್ವರ್ಗ ನರ್ಕದ ನಡುಲಿ ಬೊದ್ಕು / 3

# ನೆನ್ಪಾದೆ ನಂಗೆ ಒಂದೊಂದೇ...

ಅವ್ವ ನೀವು ಅಂದ್ ಹೇಳ್ತಿದ್ದರಿ
ಯಾರ್ದೋ ಮಾಯಿನ ಮರಕ್ಕೆ
ಕಲ್ ಹೊಡೆಕೆ ಹೋದ ನಮ್ಮ ಕರ್ದ್
ಓ... ಮಕ್ಕಳೇ
ಹೊಡೆಬೋಡಿ ಲಾಗ ಮಾಡ್‌ಬೊಡಿ ರಗಳೆ
ರಜೆ ಸಿಕ್ಕಿರೆ ಈ ಮಕ್ಕಳ ಆಳ್ಬುದು ಹೆಂಗೆ?
ನಮ್ಮ ಕಾಲಲಿ ಮಕ್ಕ
ಶಾಲೆ ಮೆಟ್‌ಕಲ್ಲ್ ಹತ್ತೊವೇ ಇಲ್ಲೆ
ಎಲ್ಲಿಯಾರ್ ಹತ್ತಿರೆ ಒಂದುನೇ ಎರ್ಡ್‌ನೇ
ಅಪ್ಪಕನ ಅಕ್ಕನ ಕೂಸುನ ನೋಡಿಕಂಕೆ
ಅಣ್ಣನ ಕೂಸುನ ನೋಡಿಕಂಕೆ ಮನೆಲಿ ನಿಲ್ಸುವೆ
ಇನ್ನ್ ಕೆಲವು–ಈಗ ತಿರ್ಗುವ ಮಕ್ಕ
ಪಂಡ್‌ಲಿ ಅಯ್ಯೆಕ್ಕಳ ಒಟ್ಟಿಗೆ ನೇಜಿ ನೆಡಿಕೆ
ಕೆಯಿ ಕೊಯ್ಯಕೆ ಗದ್ದೆಗೆ ಹೋತಿದ್ದೋ
ಆದರೆ ಈಗ ಅವ್ವ...
ಕಾಲನೇ ಕೆಟ್ಟ್ ಹೋಗುಟ್ಟು
ನಮ್ಮ ಮಕ್ಕಳ ಅವಸ್ಥೆನ ನೋಡಿ
ಕುದ್ದುಕಂಡ್ ಆಲ್ಸ್‌ಕನ
ನೆನ್ಪಾದೆ ನಂಗೆ ಒಂದೊಂದೇ...

ನಾವು ಅರ್ದಮರ್ದ ಕಲ್ತರೂ
ಒಬ್ಬನೇ ಮಂಜ ಹೆಚ್ಚಿಗೆ ಕಲೆಕ್ಕುತಾ
ದೂರದ ಪೇಟೆಲಿ ಲಾಯ್ಕುನ ಶಾಲೆಗೆ ಹಾಕಿರೆ
ಮನೆಕಡೆ ಗ್ಯಾನನೇ ಇಲ್ಲೆ
ಈ ವರ್ಷಕ್ಕೆ ಶಾಲೆ ಮುಗ್ದದೆ
ಇನ್ನಾರೂ ಅಪ್ಪ ಅಮ್ಮನ ನೋಡಿಕಣ್
ಇದ್ದ ಜಾಗೆನ ಕೂಡಿಕೆ ಬಾದುಲೆನಾ

ಎಂತಕೆ ಬಾದು. ರೇಜಿನ್ನು ಸಿಕ್ಕುದುಲೆ
ಸಿನಿಮಾ ನೋಡಿಕೆ ಟಾಕಿಸುನು ಹಕ್ಕಲೆ ಇಲ್ಲೆ
ಕಾಡ್ ಗುಡ್ಡೆಗೆ ನಾಯಿ ಗ್ಯೆದಂಗೆ ಗ್ಯೆಯಕೆ ನಾ ಬಾದುಲೆ
ನಾ ಇಲ್ಲೆ ಕಂಪೆನಿಗೆ ಸೇರ್ನೆ
ಬೇಕಾರು ನೀವುನು ಜಾಗೆ ಮಾರಿ ಇತ್ತ ಬನ್ನಿ

ನನ್ನ ಮಜನ ಈ ಮಾತ್‌ನ ಕೇಳಿ
ಬೆಳಿ ತಲೆಲಿ ಕುದ್ದ್‌ಕಂಡ್ ಆಲ್ಸ್‌ಕನ
ಸತ್ತು ಸ್ವರ್ಗಲಿ ಇರುವ ಅವ್ವ
ಹಲ್ಲ್ ಇಲ್ಲದ ಬಾಯಿಲಿ ಹೇಳ್ದ
ಆ ಮಾತುಗ....
ನೆನ್ಪಾದೆ ನಂಗೆ ಒಂದೊಂದೇ....

## ಅಂದ್ ಹುಣ್ಣಿಮೆ ಇರ್ಲ್

ಕಮ್ಮನ ಸೋಗೆನ ಮಾಡ್
ಮನೆನ ಎದುರು ಗೋಡೆಲಿ
ಅರ್ಧ ಅರ್ಧ ಕಮ್ಮನ ತಟ್ಟೆನ ಕಿಡ್ಕೆಗ
ಸಮತಟ್ಟಾದ ಜಾಗೆಲಿ ಕೆಂಪಣ್ಣನ ಮನೆ
ಮನೆನ ಸುತ್ತೊಳು ದೊಡ್ಡ ದೊಡ್ಡ ಮನೆಗ
ಅಂದ್ ಹುಣ್ಣಿಮೆ ಇರ್ಲ್

ತಿಂಗೊಳು ಬೆಳ್‌ಕ್ ಮರದ ಸೆರೆಲಿ
ಮನೆನ ಮೇಲೆಲ್ಲಾ ತುಂಬಿತ್
ಆರ್ ಜನ ತುಂಬಿದ ಕೆಂಪಣ್ಣನ ಸಂಸಾರ
ಒಂದು ಬೊಗ್ಗಿ ನಾಯಿ
ಎರ್‌ಡ್ ಕಂಟ ಕೊತ್ತಿ
ಇಪ್ಪತ್ ಮೊರಿಗಳ ಹೆತ್ತ ಹೇಂಟೆನ ಬುಟ್ಟು
ಅಂದ್ ಹುಣ್ಣಿಮೆ ಇರ್ಲ್.

ಕೆಂಪಣ್ಣನ ಹೆಂಣ್‌ನ  ಕುಟುಂಬಲಿ ಮೊದುವೆ
ಇವರ ನಾಲ್ಕ್ ಜನ ಹೆಣ್ಣ್ ಮಕ್ಕ ಇಲ್ಲಿ ಹಾಜರ್
ಮನೇಲಿ ಅಜ್ಜ ಅಜ್ಜಿ ಉಳ್ದವರ ಬುಟ್ಟು
ಕತ್ತಲೆ ಹೋಗಿ ಬೊಳ್ಪು ಆಕೆ ಆತ್
ಕಾಗಡೆ ಮನೆ ಬೆಳ್ಳೆ ಹೂಂಜನ ಕೂಂಗು ಕೇಳ್ದೆ
ಹಕ್ಕಿಗಳ ಮರ್ಡ್ಡಟ ಮನೆನ ಕಿಡಿಕೆಲಿ
ಒಲಿ ಮೊಂದ್ರಿಲಿ ಮಲ್ಗಿದವ್ಕೆ ಕೇಳ್ದೆ
ಅಂದ್ ಹುಣ್ಣಿಮೆ ಇರ್ಲ್

ಆಗಲೇ ಕೆಂಪಣ್ಣಂಗೆ ಧೈರ್ಯ ಬಾತ್
ಓಯ್... ಎದ್ರ್ಯಾ
ಅತ್ತ ತಿರ್‌ಗಿ ಮಲಗಿದ್ದ ಚೋಮಕ್ಕ
ದೇವ್ರುಗಳ ಹೆಸುರ್ ಹೇಳಿ ಎದ್ದ್ ಕುದ್ದ್‌ಕಣ್
ಹರ್‌ಂಡಿದ್ದ ನಾಲ್ಕ್ ಕೂದೊಲ್‌ನ ಜುಟ್ಟು ಕಟ್ಟಿಕಣ್
ಇರ್ಲ್ ಕನ್ಸಿಲಿ ಯಾರೋ ಬಂದಾಂಗೆ ಆತ್‌ಯಾ
ಅಂದ್ ಹುಣ್ಣಿಮೆ ಇರ್ಲ್.

ಈ ಮಾತ್ ಕೇಳ್ದ ಕೆಂಪಣ್ಣ ಹೇಳುವೆ
ನಂಗೂ ಹಂಗೇ, ಕನ್ಸ್ ಕಟ್ಟಿ ಕಣ್ಣಿಗೆ ಕಣ್ಣ್ ಮುಚ್ಚಿತ್ತಿಲೆ
ಹಂಗಾರೆ ನೀವು ಯಾಕೆ ಹೇಳ್ತ್‌ಲೆಯಾ
ನಿಂಗೂ ಯಾಕೆ ನಿದ್ದೆ ಹಾಳ್ ಮಾಡ್ದುತಾ
ಅಂತೂ ಇಬ್ಬೊರಿಗೂ ನಿದ್ದೆ ಇಲ್ಲೆ ಬುಡು
ಅದ್ ಇರ್ಲಿ ಮಾರಾಯ್ತಿ, ನಿ ಚಾಯ ಮಾಡ್
ಭಟ್ರಲ್ಲಿಗೆ ಬೇಗ ಅಡ್ಕೆ ಚೊಲ್ಲಿಕೆ ಹೋಕು
ಅಂದ್ ಹುಣ್ಣೆಮೆ ಇರ್ಲ್.

ಚೋಮಕ್ಕ ಒಲೆಂದ ಮೊಸಿನ ಬಾಯಿಗೆ ಹಾಕಿಕಣ್
ನೀರಡಿ ಕೊಟೆಗೆ ಹಕ್ಕಲೆ ಹೋದವೆ
ಮಂಡೆ ಇಲ್ಲೆ, ಏಯ್ ಇತ್ತ ಬನ್ನಿಯಾ, ಕರೆದವೆ
ಕೆಂಪಣ್ಣ ಅಂಗಳ ಕರೆಲಿ ತುಂಡು
ಬೀಡಿನ ಬಾಯಿಲಿ ಕಚ್ಚಿಕಂಡ್
ಉಚ್ಚೆ ಹೊಯ್ಯೆಕೆ ಕುದ್ದೊಳೊ
ಬೀಡಿ ಇಟ್ಟ್ ಚಡ್ಡಿನ ಬೊಳ್ಳಿ ಕಟ್ಟಿಕಂಡ್
ಓಡಿ ಬಂದವೆ, ಅಲ್ಲಿ ಇಲ್ಲಿ ಹುಡ್ಕುವೆ
ಅಂದ್ ಹುಣ್ಣೆಮೆ ಇರ್ಲ್

ಮಂಡೆಗೆ ಮುಚ್ಚಿದ ಹಲಗೆ ಅಲ್ಲಿ ಉಟ್ಟು
ಯಾರೋ ಹೊತ್ತೊಳಯಾ ಕೆಂಪಣ್ಣ ಹೇಳುವೆ
ಆಗ ಚೊಮಕ್ಕ ಹಡಬೆ ನಾಯಿ ಸತ್ತೋತ
ಅದರ ಹುಲಿ ಹೊರಿಕೆತ ಮನ್ಸ್‌ಲಿ ಗೊಡ್ಸಿಕೊಂಡವೆ
ಅದ್ ಎಲ್ಲಿಯಾರ್ ತಿರ್ಗಿಕೆ ಹೋಗಿರ್ದುಯಾ
ಕೆಂಪಣ್ಣ ಹೆಳುವೆ...
ನಿನ್ನೆದ್ ಕನ್ಸಲ್ಲ ನನ್ಸ್‌ಯಾ
ಅಂದ್ ಹುಣ್ಣೆಮೆ ಇರ್ಲ್

ಆ ಕಳ್ಳಂಗಳ ಜೋಡು ಶಬ್ದನು ನಂಗೆ ಕೇಳ್ಟು
ಸುಟ್ಟೇ ಹೋಗಲಿ ನೀ ಚಾಯ ಮಾಡ್
ಹಿಂದೆನ ಸಾಲದೊಟ್ಟಿಗೆ ಭಟ್ರು
ಮಂಡೆಗೂ ಸಾಲ ಕೊಡಿಕಿಲೆಯಾ?
ಅಂದ್ ಹುಣ್ಣೆಮೆ ಇರ್ಲ್

# ರೈತರ ಕೂಂಗು

ರೈತರ ರಕ್ತ ಬೆಚ್ಚ ಅವುಟ್ಟು
ಇದ್ದ ಜಾಗೆನ ಕೃಷಿ ಮಾಡಿಕೆ ಕಲ್ತಾವುಟ್ಟು
ಬಗೆ ಬಗೆ ಬೆಳೆಗಳ ಬೆಳ್ಸಿ ಆವುಟ್ಟು
ಹೂ ಹಣ್ಣು ನೆಟ್ಟಿಕಾಯಿ ಜಾಲ್ಲಿ ಉಟ್ಟು.

ಮೈ ಬೊಗ್ಗುಸಿ ಗ್ಯಯೊದು ಪಾಠ ಆವುಟು
ಬೆಗ್ರ್‌ಳಿಸಿ ಮೈ ಕೈ ಕಲ್ಲಾವುಟ್ಟು
ಖಾಲಿ ಜಾಗೆಲಿ ನೇಜಿ ಬಿತ್ತಿಯಾವುಟ್ಟು
ಬೆಳ್ಸಿದ ಫಲ ತಿಂಬಕೆ ಖುಷಿ ಎಷ್ಟುಟ್ಟು

ಯಾರಿಗೆ ಯಾರೂ ಇಲ್ಲದ ಸತ್ಯ ತಿಳ್‌ದಾವುಟ್ಟು
ಅವರ ತಲೆಗೆ ಅವರದೇ ಕೈ ಗೊತ್ತಾವುಟ್ಟು
ಭಂಗ ಬಂದವೊ ತಿಂಬೊದು ಕಂಡಾವುಟ್ಟು
ಸತ್ಯ ಧರ್ಮದ ದಾರಿಗೆ ಬೆಳ್ಕುಟ್ಟು

ರೈತ ದುಡ್ದರೆ ಹೊಟ್ಟೆಗೆ ಹಿಟ್ಟುಟ್ಟು
ಸುಳ್ಳು ಮೋಸ, ವಂಚನೆ ತಿಳ್ದಾವುಟ್ಟು
ಕಟ್ಟ ಕಟ್ಟ ದುಡ್ಡುನ ಗುಡ್ಡೆ ರೈತಂಗೆಲ್ಲಿಟ್ಟು
ತೆಳಿಗಂಜಿ ಕಣ್‌ತುಂಬಾ ನಿದ್ದೆ ಸಾಕಾವುಟ್ಟು.

# ಮೊದುವೆ ಮನೇಲಿ

ಮೇಗಡೆ ಮನೆ ಮಾವನ ಮಗ್ಳಗೆ ಅಂದ್ ಮದ್ವೆಯಾ
ಜಾಲಿಗೆಲ್ಲ ಚಪ್ಪರ ಹಾಕಿ ಸೆಗ್ಣೆ ಗುಡ್ಸಿಯೊಳಯಾ
ಅದರ ಜೋಸ್ತಿ ಪೇಟೆಂದ ಒಂದು ಗೂಡೆ ಬಂದುಟುಯಾ
ಹಳ್ಳಿ ಹೈದಂಗ ಅದರ ಬೊಗ್ಗಿ ಬೊಗ್ಗಿ ನೋಡುವೆಯಾ
ಏನ್ ಪೊರ್ಲು ಓಂದೆಂದ ನೊಡ್‌ಕನ ಅದರ ಪುಕುಳಿಯಾ
ತುಂಬಿದ ಮೈಲಿ ಜಾಲ್ ಇಡೀ ಗೂಡೆ ಓಡಾಡ್ತಿತ್ತ್‌ಯಾ
ಬಿಗಿಪ್ಪ ಸುರಲ್ ಜೊನಿಯಾನ್ ಹಾಕಿ ಇವರ್ನೆ ನೋಡ್ತಿತ್ತ್‌ಯಾ
ಕೂದೊಲು ನೋಡು ಹೈಂದಂಗಳ ಹಂಗೆ ಕತ್ತರ್ಸಿ ಬುಟ್ಟುಟುಯಾ
ಉಗುರಿಗೂ ಬಣ್ಣ ತುಟಿಗೂ ಬಣ್ಣ ಎಂಥಾ ಮಂಜಣೆಯಾ
ಅಜ್ಜಿಕ ಬೊಕ್ಕು ಬಾಯಿ ಬುಟ್ಟು ಮಟ ಮಟ ನೋಡುವೆಯಾ
ಅಜ್ಜಂದರ್‌ಗ ಗೋಡೆನ ಒಟ್ಟಿಗೆ ಎಂಥದೋ ಮಾತಾಡುವೆಯಾ
ಗೂಡೆ ಕಾಲ್ ಮೇಲೆ ಕಾಲ್ ಹಾಕಿ ಇಂಗ್ಲಿಷ್ ಬುಟ್ಟದೆಯಾ
"ನೆಂಟ್ರೆ ಉಂಬಕೆ ಎದ್ರಿಂತ ಮಾವ ನೀರ್ ಕೊಟ್ಟವೆಯಾ
ಹೈದಂಗ ಎಲ್ಲಾ ಗೂಡೆನ ಎದುರು ಉಂಬಕೆ ಕುದ್ದೊಳಯಾ
ಹಾಯಾ ಬಾಯ್‌ಂತ ಗೂಡೆ ಫೋನ್‌ಲಿ ಮಾತಾಡ್ದೆಯಾ
ಅದರ ಓರೆ ಕಣ್ಣ್ ನ ಮಾತ್ ಲಿ ಹೈದಂಗ ಮೈ ಮರ್ತೊಳಯಾ
ಸೇರ್ ಅಕ್ಕಿ ಉಂಬ ಹೈದಂಗ ಅಂದ್ ಪಾವ್ ಅಕ್ಕಿ ಉಂಡು
ಎದ್ದೊಳಯಾ
ಮೊದುವೆ ಮುಗ್ಸಿ ನೆಂಟ್ರುಗ  ಎಲ್ಲಾ ಊರ್‌ಗೆ ಹೊರಟಳಯಾ
ಏನೂ ಮಾತಾಡದ ಗೂಡೆ ಹೋಕನ ಬಾಯ್‌ಂತ ಹೇಳಿಟುಯಾ
ಗೂಡೆಗಳ ನೋಡ್ದ ಹೈದಂಗಳ ಮನ್ಸ್ ಹರ್ದ್ ಚೆಲ್ಲಾತ್‌ಯಾ!!
ಗೂಡೆನ ನೋಡ್ದ ಹೈದಂಗಳ  ಮನ್ಸ್ ಹರ್ದ್ ಚೆಲ್ ಚೆಲ್ಲಾತ್‌ಯಾ!!!

# ಮರೆಕಾಗದ್

ನಂಬಿದವರ ನಾವು ಮರೆಕಾಗದ್
ಕಳ್‌ದ ಕಷ್ಟದ ದಿನಗಳ ಮರೆಕಾಗದ್

ಹೊತ್ತು ಹೆತ್ತ ಅಪ್ಪ ಅಮ್ಮನ ಮರೆಕಾಗದ್
ವಿದ್ಯೆ ಬುದ್ಧಿ ಹೇಳ್ದ ಗುರುಗಳ ಮರೆಕಾಗದ್

ಹೆಂಣ್ ತವರ್‍ನ ಮರೆಕಾಗದ್
ಅತ್ತೆ ಮಾವಂಗೆ ಬೈಯೆಕಾಗದ್

ಗಂಡ ಹೆಂಣ್‌ನ ಒಂದಿಸಿಕಾಗದ್
ತುಂಬು ಸಂಸಾರನ ಒಡೆಕಾಗದ್

ಕೆಲಸ ಮಾಡದೆ ಕುದ್ರಿಕಾಗದ್
ನಾನೇ ಜನತ ಮೆರೆಕಾಗದ್

ದುಡ್ಡುನ ಹಾಂಕರ ತೋರ್‍ಸಿಕಾಗದ್
ಎಲ್ಲಾರೊಟ್ಟಿಗೆ ಒಂದೇ ಆವುದರ ಮೆರೆಕಾಗದ್

ಚಾಡಿ ಲೊಟ್ಟೆ ಹೇಳಿಕಾಗದ್
ನಮ್ಮತನನ ನಾವು ಮರೆಕಾಗದ್

ಬೇರೆಯವರ ಬಗ್ಗೆ ಹೊಟ್ಟೆಕಿಚ್ಚಿ ಪಡಿಕಾಗದ್
ನಮ್ಮ ಕಾಲ್‌ಲಿ ನಾವು ನಿಲ್ಲುದರ ಮರೆಕಾಗದ್

## ಅಮ್ಮನ ಕಥೆ

ಮನೇಲಿ ಅಮ್ಮ ಒಬ್ಬನೆ ಇರ್ದು
ಈಗ ಪ್ರಾಯನೂ ಆತ್
ಕಾಲ್ ಗಂಟ್ ಬೇನೆ ಸೊಂಟನೂ ಬೇನೆ
ಯಾರ ಒಟ್ಟಿಗೆ ಹೇಳ್ದು
ಅಪ್ಪನೂ ತೀರಿ ಹೋಗೊಳೊ
ನಾನು ತಮ್ಮಂದಿರು ಸೇರಿ ಮೂರುಮಕ್ಕ
ದೊಡ್ಡಂವ ಕೆಲ್ಸಲಿ ಬೆಂಗ್ಳೂರುಲುಟ್ಟು
ಮತ್ತೊಬ್ಬ ಅದು ಇದು ಓದಿಟ್ಟು
ಸಂಘ ಸಂಸ್ಥೆ ಜೋಸ್ತಿಗತ ಮನೆಲುಟ್ಟು
ಮನೇಲಿ ಅಡ್ಕೆ ತೋಟನೂ ಉಟ್ಟು
ಹಟ್ಟಿಲಿ ನಾಲ್ಕು ದನಗಳೂ ಒಳೊ
ಇದರ ಕೆಲ್ಸ ಅಮ್ಮ ಒಬ್ಬನೇ ಮಾಡೋಕು
ಸಣ್ಣವ ಮನೆಲಿ ಕೈಲಿ ಹಿಡ್ದ ಕೆಲ್ಸ ಮಾಡ್ದುಲೆ
ಹೊತ್ತು ಹೊತ್ತುಗೆ ಅಮ್ಮ ಅಡ್ಗೆ ಮಾಡ್ರೆ ಇಳ್ಸಿದೆ
ತಿಂದ್ ಕಣ್ಣ್‌ಮುಚ್ಚಿ ಕುದುಕಂದೆ
ಏನಾರ್ ಓದಿದೆ ಬರ್ದದೆ
ಮೊದುವೆ ಆಗ್'ತ ಹೇಳ್ರೆ ಆದುಲೆ
ನಾ ಇರ್'ಕನ ಅಮ್ಮಂಗೆ ಲಾಯಿಕ್ ಆತ್ತಿತ್
ನಾ ಬಾಕನ ಮತಡಿಕೆ ಲಾಯಿಕ್ ಆದೆ
ತಮ್ಮಂದರ ದೂರಿ ಕಣ್ಣೀರಿಸಿವೆ
ಇದ್ ಅವುಕೆ ಎಲ್ಲಿ ಕೇಳ್ದೆ
ಬೇನೆಕಾಲ್ ಎಳ್'ಕಣ್
ಮೊಡ್'ಪಳೆ ಇಸಿಕಣ್
ತೋಟಕ್ಕೆ ಹುಲ್ಲಿಗೆ ಹೋದವೆ
ತಮ್ಮ ಕುದ್ದುಕಣ್ ಕಿಡಿಕೆಲಿ ನೋಡ್ದೆ
ತಮ್ಮಂದರ ನೋಡ್ಕನ ಸಿಟ್ಟು ಬಂದದೆ
ನಂಗೆ ಗಂಡನ ಮನೆಲಿ ಬೇಕಾದಷ್ಟು ಕೆಲ್ಸ ಉಟ್ಟು

ಅಮ್ಮನ ನೋಡಿ ಆಗಾಗ ಬಾದು
ನಾ ಬಾಕನ ತಮ್ಮ ಲಾಯಿಕ್ ಮಾತಡ್ದೆ
ಗಮ್ಮತ್ತು ಮಾಡ್ದೆ, ಅಡ್ಕೆ ಮಾರ್ದೆ
ನನ್ನ ಮಗ್ಳ್ ಓಡಿ ಬಂದು
ಅಮ್ಮಾ ಅಮ್ಮ ಅಂತ ಕರ್ದ್
ನನ್ನ ಕುತ್ತಿಗೆಗೆ ಕೈ ಹಾಕಿ ಬೊಗ್ಗಿಸಿ
ಮಾವ ಎಂತದ್ದೋ ಬರ್ದದೆಂತಾ
ನನ್ನ ಕೆಬಿಲಿ ಗುಟ್ಟುಲಿ ಹೇಳ್ದೆ

## ಗಾಳದ ಮೊರ್ಲ್ಯ

ಹಳ್ಳಕೆ ಗಾಳ ಹಾಕಿಕೆ ಹೋದವೆ
ಸೂಟೆ ಮೀನೂನು ಕಡ್ದವೆ
ಬಲೇನೂ ಬೀಸುವೆ ತೋಟೆನೂ ಹಾಕುವೆ
ಹಳ್ಳಲಿ ಮುಳ್ಗಿ ಎದ್ದವೆ ಬಾವ
ಎಂತ ಮೊರ್ಲ್ಯಯಾ ಬಾವ
ಎಂತ ಮೊರ್ಲ್ಯ

ನಾಗರ ಪಂಚಮಿನೆ ಇರ್ಲಿ
ಷಷ್ಠಿ ಪಂಚಮಿನೆ ಆಗಿರ್ಲಿ
ಅಮಾಸೆ ಕೆಡ್ಡಸನೇ ಬರ್ಲಿ
ಸಂಕ್ರಮಣ ತಿಂಗ್ಳಡಿ ಆಗಿರ್ಲಿ
ನೀವೂ ಹಳ್ಳದ ಕರೆಲಿಯಾ ಬಾವ
ಎಂತ ಮೊರ್ಲ್ಯಯಾ ಬಾವ
    ಎಂತ ಮೊರ್ಲ್ಯ

ಗುಡ್ಡು ಕೈನ ಅಂಗಿ ಹಾಕುವೆ ಬಾವ
ಮುಕ್ಕಾಲು ಚಡ್ಡಿ ಮುಂಡಾಸುನ್ ಉಟ್ಟು
ಬಾಯಿ ಮುಟ್ಟ ಎಲಾಡಿಕೆ ತುಂಬಿಸಿಯೊಳರಿ
ಎಂತ ಮೊರ್ಲ್ಯಯ ಬಾವ
    ಎಂತ ಮೊರ್ಲ್ಯ

ಒಂದು ಕೈಲಿ ಸಂಗೀಸ್ ಚೀಲ
ಕುಂಞಿ ಕತ್ತಿನೂ ಹಿಡ್ದ್ಕಂಡು
ಹಿಂಬೊತ್ತು ಕಟ್ಟಿದ ಬಲೆ ನೋಡಿಕೆ
ಹೊರ್‌ಟೊಳರಿಯ ಬಾವ
ಎಂತ ಮೊರ್ಲ್ಯಯ ಬಾವ
    ಎಂತ ಮೊರ್ಲ್ಯ

ಜಿರಿ ಜಿರೀಂತ ಮಳೆನೇ ಬರ್ಲಿ
ಕೊಡ್ಕಿ ನಡ್ಗುವ ಚಳಿನೇ ಇರ್ಲಿ
ಹೊತ್ತುವ ಸುಡು ಸುಡು ಬಿಸಿಲೇ ಆಗಿರ್ಲಿ

ನೀವು ಹಳ್ಳದ ಕರೆಲಿಯ ಬಾವ
ಎಂತ ಮೊಲ್ರ್ಯಾ ಬಾವ
ಎಂತ ಮೊಲ್ರ್

ನೆರೆಕರೆವುಕೆ ಒಂದು ಮೀನು ಕೊಡಿಕಿಲೆ
ಸೊಂಟಲಿ ಕಟ್ಟಿಕಣ್ ಮೀನೇ ಇಲ್ಲೆತ
ಕಣ್ಣ ಚಾಯ ಕುಡ್ದ್ ಹೋದವೆ
ಮನೆಗೆ ಹೋದರೆ ಗೈಪು ಕೊಟ್ಟವೆ
ಗಂಜಿಂದ ಜಾಸ್ತಿ ಗೈಪುನ ತಿಂದರೆ
ಎಂತ ಮೊಲ್ರ್ಯ ಬಾವಾ
ಎಂತ ಮೊಲ್ರ್

ಅಂದ್ ಕಾಡ್ ಮೃಗಗಳ ಬೇಟೆನೂ ಇತ್ತ್
ಹಂದಿ ಕೆಂಪ ಬೊರಿಕನೂ ಹೊಡ್ದೊಳೊ
ದಿನಲಿ ಮೂರು ಸರ್ತಿ ಕಾಡಿಗೆ ಹೋದರೆ
ಮೂರು ಮುರ್ಗಗಳ ಹೊಡ್ದ ದಿನ ಉಟ್ಟುತ
ನೀವೆ ವಾರ್ತೆ ಓದಿರೆ
ಎಂತ ಮೊಲ್ರ್ಯ ಬಾವ
ಎಂತ ಮೊಲ್ರ್

ಜಡಿಕೂಟ ಮಳೆನೇ ಇರ್ಲಿ
ಜಾರುವ ಪಾಂಬೊಜಿ ಪಾಲನೇ ಇರ್ಲಿ
ಚಂಡೆ ಮುಳ್ಳು ಮುಂಡೋವು ಬಲ್ಲೇ
ಬೆದುರು ವಾಟೆನೇ ಅಡ್ಡ ಬರ್ಲಿ
ಏನೇ ಇರ್ಲಿ ಬೊಗ್ಗಿ ಸೆರೇಲಿ ಹುಗ್ಗಿ
ಗಾಳ ಹಾಕುವೆಯಾ ಬಾವ
ಎಂತ ಮೊಲ್ರ್ಯಾ ಬಾವ
ಎಂತ ಮೊರ್ಲ್ರು

ಹೆಂಣ್ ನಾಯಿಗೆ ಬೈದಂಗೆ ಬೊಯಿದವೆ
ಗಾಳಕೆ ಹೋಕನ ನೆಲಕ್ಕೆ ಬೊಡ್ಡವೆ
ನೆರೆಕರೆವು ಬಾವ ಕಾಣದಿದ್ದರೆ
ಹಳ್ಳದ ಕರೇಲಿ ಹುಡ್ಕುದುತಾ
ಬಾಯಿ ಬುಟ್ಟು ನೆಗಾಡುವೆ
ಎಂತ ಮೊಲ್ರ್ಯಾ ಬಾವ
ಎಂತ ಮೊಲ್ರ್

# ಕಡೇ ಉಸುರು

ಕಾಗಡೆ ಮನೆ ಬೊಳ್ಳು ನಾಯಿನ ಪಾಂಗ್
ಹಂತಿ ಮಣೆಲ್ಲಿ ಕುದ್ದ ನನ್ನ ಕೆಬಿಗೆ ಹೊಕ್ಕಿತ್ತ್
ಮೊಂದಿರಿಲಿ ಮಲ್ಗಿದ್ದ ನಮ್ಮಮ್ಮನ ಮೈ
ಬಿಪಿ,ವಾತ, ಸಕ್ಕರೆಲಿ ತುಂಬಿ ಮೊಗೆತಿತ್ತ್
ಮಲಗಿದ್ದಲೇ ಮಸುಗುತ್ತಿದ್ದ ಅವು
ಅಣ್ಣಾ... ಅಕ್ಕಾ... ನೀರ್ ಕೊಡಿನೆ
ಈ ಮಾತು ಕೇಳದೇ ವರ್ಷನೇ ಕಳೆದಿತ್ತು
ನನ್ನ ಗೂಡೆ ನೀರ್ ಹಿಡ್ದ್ ನಿತ್ತುಟು
ಅಮ್ಮನ ತಲೆ ನನ್ನ ತೊಡೆ ಮೇಲುಟ್ಟು
ದೊರ್ಪುನ ಮಾತ್‌ಗ ಆ ಬಾಯಿಲಿ
ಮಂಜ ನೀವು ಲಾಯಿಕ್ ಬೊದುಕಿ ಬಾಳೊಕು
ನನ್ನ "ಊರು ಹೋಗು, ಕಾಡ್ ಬಾ" ತಾ ಕರ್ದದೆ.
ನನ್ನದರತ್ತಾ ಮೋರೆ ತಿರುಗಿಸಿ
ಇದರ ಮೊದುವೆ ಆದು ಬೇಡಂತ ಹೇಳಿದ್ದೆ
ಜಾತಿದ್ದೂ ಅಲ್ಲ, ಜಾಗೆನೂ ಇಲ್ಲೆಂತಾ
ಹೆತ್ತ ಮಗಳಂಗೆ ಲಾಯಿಕ್ಕೂ ನೋಡ್ಯಾಳಾ
ನಮ್ಮ ಮನೆಗೆ ಮಂಜಂಗೆ ನೀ ಸರಿಯಮ್ಮಾ
ನನ್ನದರ ಕಣ್ಣ್‌ಲಿ ನೀರ್ ಉಕ್ಕುತಿತ್ತ್
ಅಮ್ಮಾ... ಸಾಯೆವ ಮಾತು ಯಾಕೆ
ಹೇಳ್‌ದ್ದ ನನ್ನ ಮನ್ಸ್ ಮತ್ತೆ ಮಾತಾಡ್ಲೆ
ಮಕ್ಕಳಾ ಪೊರ್ಲುಲಿ ನೋಡಿಕಣಿ
ಇನ್ನು ಎನೇನೋ ಗೊಡಿಸಿಕಂಡ್
ಅರ್ಥ ಆಗದೆ ಗಾಳಿಗೆ ತೇಲಿ ಹೋತ್
ನಾವು ನೀರ್ ಕುಡ್ಸಿದೋ

ನೀರ್ ಹೊಟ್ಟೆಗೆ ಹೋತಿದ್ದಾಂಗೆ
ಅದರತ್ತ ತಿರ್‌ಗಿದ ಅಮ್ಮನ ಬಾಯಿ ಮುಚ್ಚಿತ್
ಕಣ್ಣ್‌ಗಳ ಹೊಳ್ಪು ಬಾಡಿತ್
ಬೊಗ್ಗಿದ ಕೈ ಕಾಲ್ ಮುದ್ದೆಗಟ್ಟಿದೋ
ನಮ್ಮ ಕಣ್ಣೆದುರಿಗೇ ಉಸುರು ನಿಲ್ಲಿಸಿದೋ
ಬೀಸುತ್ತಿದ್ದ ಗಾಳಿ ಸ್ವರ ಜೋರ್ ಜೋರಾತ್ತ್
ಜಡಿಕುಟ್ಟು ಮಳೆಲಿ ನಾಯಿ ಪಾಂಗ್ ದೂರಾತ್
ಜುವ ಇಲ್ಲದ ಅಮ್ಮನ ನೆನ್‌ಪ್ಪು ನಮ್ಮಲ್ಲಿತ್ತು.

## ಏನ್ ಹೇಳ್ರೆ ಸಣಪಾ...?

ಏನ್ ಹೇಳ್ರೆ ಸಣಪಾ
ವಿಷಯ ಕೆಳ್‌ಕನಾ ಉಟ್ಟಿಲ್ಲಾ
ತಲೆಗೆ ಮರ ಬಿದ್ದಾಂಗೆ ಆದೆ

ಭತ್ತ ತಿಂಬಕ್ಕೆ ಬಾವ ಗಿಳಿ, ಹೊಟ್ಟ ಕೊಂಗ್ರ್ಗುಗ
ಏಮೆ, ಎಲಿ ಹೆಗ್ಗಣಗ
ಕಟ್ಟ ಪುಣಿಲ್ಲಿ ನಡೆಕನ
ಕಾಂಬ ಉಜಿರ್ ಕಣಿಗ

ತೆನೆ ಹೊತ್ತ ಹಸುರು ಪೈರ್‌ಗ
ಬೊಳ್ಪಾಕನ ಗದ್ದೆಲಿ ಹತ್ತಿಪ್ಪತ್ತು ಹೆಣ್ಣ್ ಮಕ್ಕ
ನೇಜಿ ನೆಡುಕನ ಕೊಯ್ಯೆಕನ
ಆ ಬಾಯಿಂದ ಬೀಳುವ ಪೊದ್ಯಗ
ಅದರ ಪೊರ್ಲುನೇ ಬೇರೆ ಸಣಪಾ...!

ಹೆಂಣ್ ಮಕ್ಕಳ ಮಾತ್ ಕತೆ ನೆಗೆ
ಜಾತ್ರೆನೇ ಗದ್ದೆ ಗೋರಿಲ್ಲಿ ನಡೆತಿತ್ತು
ಉಂಬಕೆ ಬಾಕನ ಹಲ್ಸ್‌ನ ಹಣ್ಣ್‌ನ ಕೊಯ್ದು ಇಸಿ
ಗಂಜಿಂದ ಜಾಸ್ತಿ ತೆಳಿನೇ ಕುಡ್ಯೆಕೆ ಕೊಡ್ದುಗಡ
ಈಗನಾಂಗೆ ಕತ್ತಲೆ ಆಕನ ಸಂಬಳ ಉಟ್ಟಯಾ ಸಣಪಾ...!

ಗದ್ದೆ ಕೆಲ್ಸ ಮುಗ್ಸಿ  ಭತ್ತ ಮಿದ್ದ್
ಒಂದು ಮುಡಿ ಎರಡ್ ಮುಡಿ ಅಕ್ಕಿ ಹೊರುತ್ತಿದ್ದೋ
ಈಗ ಗದ್ದೆಲಿ ಅಡ್ಕೆ ದೈಗ, ಗುಡ್ಡೆಲಿ ರಬ್ಬರ್ ಮರಗ
ಹೊಟ್ಟೆಗೆ ತಿಂಬ ತಿಂಡಿ ತಿನ್ನುಸುಗೆ
ಅಂಗುಡಿ ಮೆಟ್ಟುಕಲ್ ಹತ್ತುವೆಯಾ ಸಣಪಾ...!

ಮಣ್ಣ್‌ಲಿ ಮೈ ಬೊಗ್ಗುಸಿ ಗೈಯೇವಿಲ್ಲೆ
ಇದ್ದೋವು ಸಂಬಳದೊಟ್ಟಿಗೆ ಕುಡೆಕೆ ಕೇಳುವೆ
ಹಿಂಗೆ ಆದರೆ ಮುಂದೆ ಹೇಂಗೆ ಸಣಪಾ...?
ವಿಷಯ ಕೇಳುಕನಾ ಉಟ್ಟಲ್ಲ
ತಲೆಗೆ ಮರ ಬಿದ್ದಾಂಗೆ ಆದೆ...!

## ಪೋಯಿಯ ಬಾವ

ಪೋಯಿಯ ಬಾವ
ನಂಗೆ ಹೋಕುಂತಾದೆಯ
ಸಣವನೊಟ್ಟಿಗೆ ಗದ್ದೆಗೆ

ಪಚ್ಚೆ ಪಚ್ಚೆ ಮರಗಳ ಪೊರ್ಲುಯಾ
ಕಟ್ಟೆಪುಣಿಲಿ ನಡೆವ ಮೊರ್ಲುಯಾ
ಚಿಗುರು ಹುಲ್ಲು ತಿಂಬ ಎಮ್ಮೆ ದನಗಯಾ
ಬಾನಲಿ ಹಾರುವ ಸಾಲು ಕೊರುಂಗ

ಮೊಡ್‌ಪಾಳೆ ಇಸಿ ನೇಜಿ ನೆಡುವ ಹೆಂಣ್ ಮಕ್ಕಯಾ
ಊರಿಗೆಲ್ಲಾ ಹಬ್ಬನೇ ಗದ್ದೆ ಗೋರಿಯಾ
ಮಜಲ್ ಇಡೀ ಎಲಿ ಹೆಗ್ಗಣಗಳ್ದೇ ಕಾರ್‌ಬಾರ್‌ಯಾ
ನೇಜಿ ನೆಡ್‌ಕನ ಎಂತ ಪೊದ್ಯಯಾ

ಕೋಣಕಂಬಳ ಕೋಳಿಕಟ್ಟಗ ಈಗ ಎಲ್ಲ್ಯಟ್ಟ್‌ಯಾ
ಬೊಂರ್ಬಿಕೆ ಸಿಕ್ಕುವ ಉಬರ್ ಮೀನ್ ರಾಸಿ ರಾಸಿಯಾ
ಉಜಿರ್ ಕಣಿಲಿ ದೊಡ್ಡ ಕೊಂಬುನ ಎಸ್‌ಂಡ್‌ಗೆಸ್ಟ್‌ಯಾ
ಸೂಟೆ ಮೀನು ಗಾಳ ಹಾಕುವ ಪೊರ್ಲು ಎಲ್ಲಿಯಾ

ಪೋಯಿಯ ಬಾವಾ
ನಂಗೆ ಹೋಕುಂತಾದೆ ಸಣವನೊಟ್ಟಿಗೆ ಗದ್ದೆಗೆ

# ಗೂಡೆ ಹುಚ್ಚು

ಬಸ್‌ಲಿ ಒಂದು ಗೂಡೆಗೆ ಒರ್ಗಿದ್ ಕುದ್ದಿತ್ತ್
ಅರ್ಳಿದ ಮಲ್ಲಿಗೆ ಪೊರ್ಲು, ಗೂಡೆನ ಮೋರೆಲ್ಲಿತ್ತ್
ಉಗುರ್‌ಲಿ ಮೆಲ್ಲಂಗೆ ಅವ ಜಿಂಟಿಕೆ ಸುರುಮಾಡ್ತ್
ಕಣ್ಣ್‌ನ ಹೊರ್ದಸಿ ಗೂಡೆ ಇವನ್ನೇ ನೋಡ್‌ತ್ತಿತ್ತ್
ಜನಗಳೆಡೆಲ್ಲಿ ಮರ್ಯಾದಿ ಹೋದೆತ ಹೆದ್ರಿಕೆ ಆತಿತ್ತ್
ಗೂಡೆ ಕೈಲಿದ ಫೋನ್‌ನ ಒತ್ತಿತ್
ಗಂಡಗೆ ಕಥೆನ ಬುಡ್ದುಸಿ ಹೇಳ್‌ತ್ತಿತ್ತ್

ತಣ್ಣಂಗೆ ಮುಟ್ಟಿದ ಹೈದಂಗಾಗಲೆ ಬೆಗರ್ ಸುರೆತ್ತಿತ್
ತಿರ್ಗಿದ್ ನೋಡಿರೆ ಹುಲಿನಂಗೆ ಮೇಲೆನೆ ಬಂದಿತ್ತ್
ಕಣ್ಣ್ ಮುಚ್ಚಿದ್ ಬುಡುಕನ ಮುಸುಂಡ್ ಬಾಡಿದ್ ಹೋಗಿತ್ತ್
ಕಣ್ಣ್ ಕತ್ತಲೆ ಹೋಗಿ ಬಾನನೇ ತಿರ್‌ಗ್ತಿತ್ತ್
ಗೊತ್ತಿದ್ದ್ ಕಿಚ್ಚಿನ ಮುಟ್ಟಿದ ಹಂಗಾತ್
ಹೋತ್ತಿದ್ದ ಬಸ್ಸ್ ನಿತ್ತೇ ಬುಟ್ಟಿತ್ತ್
ಜನ ಸೇರುವ ಹೊತ್ತಿಗೆ ಜಾಗೆ ಖಾಲಿ ಮಾಡ್ತಿತ್ತ್
ಊರಿಡೀ ಇವಂದೆ ಬೆಚ್ಚ ಬೆಚ್ಚ ಸುದ್ದಿಯಾಗಿತ್ತ್
ಪೆಟ್ಟ್ ತಿಂದ ಅವಂಗೆ ತಪ್ಪು ತಿಳಿದಿತ್ತ್
ಗೂಡೆಗಳ ಕಂಡರೆ ಇವ ತಿರ್‌ಗಿದ್ ನಿಲ್ಲುತಿತ್ತ್
ತಪ್ಪಿದ್ ಗೂಡೆಗಳ ಮುಟ್ಟಿಕೆ ಬೊತ್ತ್‌ತಾ ಹೇಳ್‌ತ್ತಿತ್ತ್

# ಮೊಣ್ಣುನ ಬೊದುಕು

ತಲೆಗೊಂದು ಮೊಡ್‌ಪ್ಪಾಳೆ ಇಟ್ಟ್ ಕಂಡ್
ಕೈಲೊಂದು ಕತ್ತಿ ಹಿಡ್ಕಂಡ್
ಸೊಪ್ಪುನ ಗುಡ್ಡೆಗೆ ಹೋಗುಮಯಾ
ಕಾಡ್ ಬೀಸಿ ಚೆರುಂಬು ಕಟ್ಟಿ
ಹೊರೊಮಯಾ

ಕೈಗೊಂದು ಮಾಯಿಪು ಹಿಡ್‌ಕಂಡ್
ಜಾಲ್ ಇಡೀ ನೀರ್ ಹಾಕಂಡ್
ಅಂಗಳ ಗುಡ್ಸಿ ಹಾಕೊಮಯಾ
ಮನೆನ ಸ್ವಚ್ಛ ಮಾಡೊಮಯಾ

ಭತ್ತ ರಾಶಿ ಮಾಡಿಕಂಡ್
ಅಟ್ಟಂದ ಒನ್‌ಕೆ ತೆಕ್ಕನೆಯಾ
ನೆರ್ಗುಳಿಲಿ ಭತ್ತ ಮಿದೆಮಯಾ
ಮೈ ಬೊಗ್ಗುಸಿ ಬೆಗರ್ ಸುರ್ರಿ ಗೈಯೆಮುಯಾ

ನೊಂಜ ನೇಗಿಲ್ ಹೆಗ್ಲಿಲಿ ಹೊತ್ತಳೆಯಾ
ಎತ್ತುಗಳ ಬಿಚ್ಚಿ ಗದ್ದೆಗೆ ಹೋನೆಯಾ
ನೊಂಜ ನೇಗಿಲಿಗೆ ಬೊಟ್ಟು ಹಾಕಳೆಯಾ
ಹೂಡಿ ಎತ್ತ್‌ನ ಮೇಯಕೆ ಬುಟ್ಟನೇಯಾ

ಬಾಯಿಗೊಮ್ಮೆ ಎಲಾಡಿಕೆ ಹಾಕೊಕ್ಕುಯಾ
ತುಟಿ ಕೆಂಪು ರಕ್ತ ಬಣ್ಣ ರಟ್ಟೊಕುಯಾ
ಲಂಗನ ಎತ್ತಿ ನೀ ಸರಿಲಿ ಕಟ್ಟಿಕಯಾ
ಸೆರ್‌ಗ್‌ನ ಸೊಂಟಕ್ಕೆ ಎಳ್ದ್ ಸಿಕ್ಕ್‌ಸಿಕಯಾ

ಕೈಗೆ ಕೈ ಸೇರ್ಸಿ ಗೈಯೆಮೋಯಾ
ಹೆಗುಲುಗೆ ಹೆಗುಲು ಜೋಡ್ಸೊಮೊಯಾ
ಬಿಸುಲೋಗಿ ನೆರಳಾತ್ ನೋಡುಯಾ
ತಿಂಗೊಳು ಬೆಳ್‌ಕುಟ್ಟು ರಾಗಿ ಬೀಸೊಮುಯಾ

ಬಾಯ್ಲಿ ಓಬೇಲೆ ಹಾಡಿಕಂಡ್
ಕೈ ಕಾಲ್‌ಲ್ಲಿ ಮೊಣ್ಣು ಮೆತ್ತಿಕಂಡ್
ಮೊಣ್ಣುನ ಮಕ್ಕ ನಾವು ಮರೆಬಡಯಾ
ಇದು ಮೊಣ್ಣುನ ಬಣ್ಣದ ಬೊದ್ಕುಯಾ

# ಪ್ರೀತಿ ಇಲ್ಲದ ಗೂಡೆ

ನಂಗೆ ಆತ್ತ್ ಒಬ್ಬು ಗೂಡೆನ ನಂಟ್
ತಂಜಣೆ ಮಂಜಣೆ ಮಾಡಿ ಬುಟ್ಟಿತ್ತ್
ಕೇಳಿಯೇ ಬುಟ್ಟೆ ನಾ ಮಕ್ಕಳಾಟ ಬುಟ್ಟ್
ಯಾಗ ನಮ್ಮ ಬದುಕಿಗೆ ಮೂರು ಗಂಟ್

ಶೈಲಿ ಮಾಡಿ ಸುತ್ತಿಸಿ ಕೆಟ್ಟೆ
ಕೈಲಿ ಚಿನ್ನ ದುಡ್ಡುನ ಕೊಟ್ಟೆ
ಮನೆಲಿ ಅವ್ವ ಅಪ್ಪನ ಬುಟ್ಟೆ
ಹಿಂಗೇ ಕಳ್ತ್ ಹಂಞ ದಿನಗಳಷ್ಟೆ
ಮುಗುದೇ ಹೋತ್ತ್ ಕೈಲಿಂದ ಗಂಟ್

ಮಾಣ್ದಿನ ಮೆಲ್ಲನೆ ಬುಸುಗುಟ್ಟಿ ಹೊರ್ಟಿತ್ತ್
ತುಟಿಗೆ ಕೆಂಪು ರಕ್ತ ಬಣ್ಣನೂ ಹಾಕಿತ್ತ್
ಕೈ ಬೇರೆ ಹೈದನ ಹೆಗುಲ್ಲಿತ್ತ್
‘ಯಾರುಯಾ ಅವ’ ನಾ ಹೇಳ್ತ್ತಿದ್ದಂಗೆ
‘ನನ್ನವಯಾ’ ಹೋರ್‌ಟೇ ಹೋತ್ತ್ ನನ್ನ ಬುಟ್ಟು

ಅವ್ವು ಪ್ರೀತಿ ನನ್ನಲ್ಲ ದುಡ್ಡು ಬಂಗಾರ್ನ
ಎಲ್ಲಾ ಕಳ್‌ಕಂಡ್ ದಾರಿ ಉದ್ದ ಹೊರ್‌ಟೆ
ಆಗ ಹೊದ್ದ ಓಲ್ಲಿ ಎಳ್ದ್ ಅಮ್ಮಾ...
ಬೊಳ್ಪಾತು ಎದ್ರಿಯಾಂತ ಕರ್‌ದವೆ

# ಅತ್ತೆ ಮಗಳೆ ಅಮ್ಮಿ

ಗುತ್ತಿಗಾರ್ ಅತ್ತೆ ಮಗಳೇ ಅಮ್ಮಿ
ಗಟ್ಟಿಯಾಗಿ ಹೊರಟೆ ನೀ ನೆಲ್ಲಿಗಮ್ಮಿ
ಅತ್ತೆನೂ ಮಾವನು ಬಾತ್ಲೆನಾ
ಬಿಸುಲುಗೆ ಕೊಡೆ ನಿಂಗೆ ಇಲ್ಲೆನಾ

ನೀ ಒಬ್ಬನೇ ಹೊರ್‌ಟದ್ದು ಯಾಕೆ ಹೇಳ್
ಗಾಡಿನ ತಕ್ಕಂಡ್ ನಾ ಬರಕಾ ಹೇಳ್
ಬೇಜಾರೇನು ಮಾಡ್ಬೊಡಿ ಬಾವಾ
ನಿಮ್ಮ ಕಂಡ್ ಬಾತ್ ನಂಗೇ ಜೀವಾ

ಹೊಸೊಳಿಕೆ ಕಟ್ಟೆಮನೆ, ಕುವೆಕೋಡಿ
ಕಡೋಡಿ, ಮೊಟ್ಟೆಮನೆ, ದಂಬೆಕೋಡಿ,
ಎಲ್ಲಾ ಕಡೆ ತಿರ್ಗಿ ತಿರ್ಗಿ ಬಂದೆ ಬಾವಾ
ಅಲ್ಲೆಲ್ಲೂ ನೀವು ಇತ್ಲೆ ಬಾವಾ

ಬೇಜಾರೆಕೆಮಾಡ್ದು ಮಾರಾಯ್ತೀ ನೀ
ನಿನ್ನ ನೋಡಿಕಾಕನ ಬಂದೆ ನಂಗೆ ಕಣ್ಣ್ ನೀರ್
ಬೇಡ –ನಂಗೆ ನೀರು ಬೇಡಾ
ನೀವೇ ನನ್ನ ಗಂಡ ಆಕು

ದೊಡ್ಡವರ ಒಪ್ಪುಸಿ ಮದ್ವೆನು ಆಗಮಯಾ
ಕಿರಿಯರ ಕೂಡಿ ಬಾಳ್ ಸಾಗ್ಸೊಮಯಾ

# ಮಂಜನ ನೆನ್ಪು

ಬಿಸುಲೋಗಿ ಮಳ್‌ಗಾಲ ಹಿಡ್ತ್
ಮನ್ನೆ ಹುಟ್ಟಿದ ಗೂಡೆ ನೆರ್ತ್
ಕಪ್ಪಿದ್ದ ಕೂದೊಲು ಬೆಳ್ಳಗಾಗುಟ್ಟು
ಕೆಂದಾಳೆಲಿ ಕಾಯಿ ಸುರೆತಾವುಟ್ಟು
ಮನೆ ಬುಟ್ಟ ಮಂಜನ ನೆನ್ಪಾತಾವುಟ್ಟು
ಕಪಿಲೆ ಹಸು ಕರ್ ಹಾಕಿಟ್ಟು
ಮಂಜನ ಪ್ರಾಯದವುಕೆ ಕೂಸಾಗುಟ್ಟು
ಒಟ್ಟಿಗೂಡಿದ ಊಡೆಗೆ ಚಾಕರಿ ಆವುಟ್ಟು
ಹಾಲುಂಡ ಮಂಜ ಮಾತ್ ಮರ್ತುಟ್ಟು

ಹಲ್ಸನೆಕ್ಕಿ ಸಾಂತಣಿ ಬೋಗುಣಿಲಿ ತುಂಬಿಟ್ಟು
ನೀರ್‌ತೋಳೆ ಮಾಂಬಾಳ ಅಟ್ಟಲುಟ್ಟು
ಹಂದಿ ಉಪ್ಪಣ ಬೆಸಗೆ ಅಡಿಲಿ ಒಣಗುತಾ ಉಟ್ಟು
ಉಪ್ಪುಲಿ ಹಾಕಿದ ಮಾಯಿನಕಾಯಿ ಬೋಗುಣಿಲುಟ್ಟು
ಮನೆ ಬೆಳ್ಗುವ ಮಂಜನ ಕಾಲ್‌ಸ್ವರ ಕೇಳಿಕಂಡುಟ್ಟು.

# ಇವ ನನ್ನ ತಮ್ಮ

ಎಲ್ಲವರಂಗಲ್ಲ ಇವ ನನ್ನ ತಮ್ಮ
ಇವ ಎಲ್ಲವರಂಗಲ್ಲ

ಒಳ್ಳೊವು ಬಾರಿ ಜನ ಇಲ್ಲೆ
ಇದ್ದರೂ ಇವನಂಗಿಲ್ಲೆ

ಯಾರಿಗೂ ಬೇಡದ್ದೂ ನೆನ್ಸಿಕಿಲ್ಲೆ
ಯಾರೊಟ್ಟಿಗೂ ಮುನ್ಸಿಕಾಕಿಲ್ಲೆ

ನೆಂಟ್ರು ಜಾತ್ರೆ ತ ಇಡೀ ದಿನ ಮುಗ್ಸಿಕಿಲ್ಲೆ
ಹೊತ್ತಿಗೆ ಸರಿ ಎತ್ತಿಕಂದೆ

ಬೇಕಾಬಿಟ್ಟಿ ಖರ್ಚಿ ಮಾಡಿಕಿಲ್ಲೆ
ಮಾಡ್ದ ಕೆಲ್ಸಂದ ಹೆಚ್ಚಿಗೆ ತಕಂಕಿಲ್ಲೆ

ಯಾರೊಟ್ಟಿಗೂ ಸಾಲ ಮಾಡಿಕಿಲ್ಲೆ
ಕೊಟ್ಟ ಸಾಲನ ತಿರ್ಗಿ ಕೇಳಿಕಿಲ್ಲೆ

ಮೋರೆಗೆ ತಕ್ಕ ಮಾತಾಡಿಕಿಲ್ಲೆ
ಇದ್ದದರ ಕಡ್ಡಿ ಮುರ್ದಾಂಗೆ ಹೇಳ್ದೆ

ಬೊತ್ತದವರ ಚಾಕ್‌ರಿ ಮಾಡ್ದೆ
ಕಷ್ಟದವರ ಕಣ್ಣೀರು ಒರ್ಸಿದೆ

ಎಲ್ಲಾವರಂಗಲ್ಲ ಇವ ನನ್ನ ತಮ್ಮ
ಇವ ಎಲ್ಲವರಂಗಲ್ಲ

# ಗೂಡೆನ ಬೇಟೆ

ಹೈದಂಗೆ ಮೊದುವೆ ಆತಿಲೆಯಾ
ಈ ಕಾಲಲ್ಲಿ ಮೊದುವೆ ಆಕಿಲ್ಲೆಯಾ

ಇವಂಗೆ ಆವ ಗೂಡೆ ಸಿಕ್ಕುದುಲೆಯಾ
ಸಿಕ್ಕೊವೂ ಯಾರು ಇವನ ಒಪ್ಪುದುಲೆಯಾ

ಆಟ ಜಾತ್ರೆಲ್ಲಿ ಗೂಡೆ ಬೇಟೆ ಮಾಡ್ದೆಯಾ
ಮದ್ವೆ ಮನೆಗಳಲ್ಲಿ ಕಣ್ಣಾಕಿದ್ದೆಯಾ

ಇವನ ಬಣ್ಣ ಕಪ್ಪು ಕಸ್ತೂರಿಯಾ
ಹುಡ್ಕುದು ಹಾಲ್ ಬೆಳ್ಳನೆ ಗೂಡೆನಯಾ

ಎಂಟ್‌ನೇಗೆ ಶಾಲೆ ಬುಟ್ಟುಟುಯಾ
ಗೂಡೆ ಡಿಗ್ರೀ ಮುಗಿಸೋಕಡಯಾ

ಕುಲಗೋತ್ರ ಕೂಡಿ ಬರೋಕಡಯಾ
ರಾಶಿ ನಕ್ಷತ್ರ ಒಪ್ಪಕಡಯ

ಗೂಡೆ ಅಡ್ಗೆ ಮಾಡಿ ಇಕ್ಕಕಡಯಾ
ತೋಟದ ಕೆಲ್ಸಕ್ಕೂ ಹೋಕಡಯಾ

ನೆಂಟ್ರಕಡೆ ಗಟ್ಟಿಬೇಕಡಯ
ಚಿನ್ನ ದುಡ್ಡೂನು ಕೊಡಕಡಯಾ

ಅಪ್ಪ ಅಮ್ಮನು ಗೂಡೆನ ಒಪ್ಪಕಡಯಾ
ಅಕ್ಕ ಬಾವಂಗೂ ಸರಿ ಕಾಣಕಡಯಾ

ಇವಂಗೆ ವರ್ಷ ನಲವತ್ತ್ ಕಳ್ತ್‌ಯಾ
ಗೂಡೆ ಇಪ್ಪತ್ತೈದರ ಒಳಗೆ ಇರಕಡಯಾ

ಕುದ್ಕ ಇವನ ಬಾಯಿ ಬೊಂಬಾಯಿಯಾ
ಊರಿಡೀ ಇವಂದೇ ಕಾರುಬಾರುಯಾ

ಹೈದಂಗೆ ಮೊದುವೆ ಆತಿಲೆಯಾ
ಈ ಕಾಲಲ್ಲಿ ಮೊದುವೆ ಆಕಿಲ್ಲೆಯಾ

## ಮೆತ್ತನೆ ಮಾತ್‌ಗ

ನಂಗೆ..., ಯಾರೋ ಆಂಜಿದಂಗಾತ್
ಅದೇ, ಅದೇ, ಸತ್ಯಗ,
ನಾ ಹುಡಿಕಂಡಿದ್ದ ಸತ್ಯಗ
ಯಾರೋ ಹೇಳ್‌ದರ ಕೇಳದ
ನೋಡದರ ನಂಬದ ನನ್ನಂತವುಕೆ
ಹಂಞ ಹಂಞ ಕಂಡಾಂಗದೆ ಸತ್ಯಗ
ಎಡೆಡೆ ಕಾಂಬ ಸತ್ಯಗಳ
ಹೇಳೊವಿಲ್ಲೆ, ಹೇಳಿರೆ ಕೇಳೊವಿಲ್ಲೆ
ಸುಳ್ಳು ಮೋಸದ ಮೊನ್ಸರೊಳಗೆ
ಹೊಲ್ಸ್ ಮಾತಾಡುವ ಬಾಯಿಗಳೊಟ್ಟಿಗೆ
ಸತ್ಯ ಮಾತಾಡಿಕೆ ಬಾಯಿ ಬಾದುಲೆ
ಸತ್ಯ ಸಾಯಕಿಲೆ ಸುಳ್ಳು ಮರೆಕಿಲ್ಲೆ
ಅರ್‌ಬಾಯಿ ಕಿರ್‌ಚ್ಚಟ್ಟದ ಎದುರು
ಮೆತ್ತನೆ ಮಾತ್‌ಗ ಕೇಳ್ದುಲ್ಲೆ ಕಾಂಬೊದುಲ್ಲೆ
ಸತ್ಯ  ಕತ್ತಲೆಲಿ ಕಾಲಡಿಗೆ ಆಕಿಲ್ಲೆ
ಇಂದಲ್ಲ ನಾಳೆ ಬೆಳ್‌ಕಿಗೆ ಬಾದು
ಬೊಬ್ಬೆ ಮಾಡದೆ ಮೆತ್ತನೆ ಮಾತ್‌ನ ಕೇಳೊಕು
ಕಣ್ಣ್ ತುಂಬಾ ಕಾಣೊಕು

# ನನ್ನ ಕನ್ಸ್‌ನ ಗೂಡೆ

ನನ್ನ ಗೂಡೆ–ಟಿ.ವಿ ನೋಡಿಕಿಲ್ಲೆ
ಪೇಪರ್ ಓದಿದೆ, ರೇಡಿಯಾನು ಕೇಳ್ದೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ–ಜಡೆ ನೆಯ್ದು ಹೂವು ಮುಡ್ದದೆ
ದೊಡ್ಡ ಬೊಟ್ಟು ಹಾಕಿದೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ– ಚೆಡ್ಡಿ ಬೊನಿಯಾನ್ ಹಾಕಿಕಿಲೆ
ಮೈಪೂರ ಮುಚ್ಚುವಂಗೆ ಸೀರೆ ಉಟ್ಟದೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ–ಮೊಬೈಲ್ ಫೇಸ್‌ಬುಕ್ ನೋಡ್ದುಲೆ
ಈಗೊಳು ಕಾಗದನೇ ಬರ್‌ದದ್ದೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ–ಬಾಯಿ ಬುಟ್ಟರೆ ಅರೆಬಾಸೆ ಮಾತಾಡ್ದೆ
ಬೇರೆ ಬಾಸೆನ ಸೇರ್ಸಿ ಅರೆಬಾಸೆನ ಕೊಲ್ಲಿಕಿಲೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ–ನೆಂಟ್ರುಗಳ ಪೊರ್ಲುಲಿ ಮಾತಾಡ್ಸಿದೆ
ಇದ್ದದರ ತಿಂಬಕ್ಕೆ ಕೊಟ್ಟದೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ–ನಾವು–ನಮ್ಮೋದ್‌ತ ಬೆರ್‌ದ್ದದೆ
ಕಷ್ಟ ಇದ್ದೊವುಕೆ ಉಪಕಾರ ಮಾಡ್ದೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ–ಮನೆಲ್ಲಿ ಎಲ್ಲವರ ಗೌರವಿಸಿದೆ
ತಪ್ಪಿನಡ್ದರೆ ಬುದ್ದೀನು ಹೇಳ್ದೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ–ದೊಡ್ಡ ಶಾಲೆಲಿ ಹೆಚ್ಚಿಗೆ ಕಲ್ತುಟ್ಟು
ಕೆಲ್ಸ ಸಂಬಳತ ಊರು ಬುಟ್ಟೊತ್ತಿಲೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ– ಹೆತ್ತ ಅವ್ವ ಅಪ್ಪನ ನೆನ್ಸಿಕಂದೆ
ಹುಟ್ಟಿದ ಮನೆನ ಮರ್‌ತ್ತಿಲೆ
ನನ್ನ ಕನ್ಸ್ ಮನ್ಸ್‌ಲ್ಲಿ
ನನ್ನಗೂಡೆ–ನನ್ನ ಕನ್ಸ್‌ನ ಗೂಡೆ
ನನ್ನ ಕನ್ಸ್ ಮನ್ಸ್‌ಲ್ಲಿ

# ನಾ ಸ್ವಾರ್ಥಿನಾ....?

ಸ್ವಾರ್ಥನೇ ತುಂಬಿದ ಈ ಲೋಕದೊಳಗೆ
ನಂಗಾಗಿ ನಾ ಎಂದೂ ಬೇಡಿಕಂತಿಲ್ಲೆ
ದೇವ್ರೇ ಎಲ್ಲಾವುಕ್ಕೂ ಒಳ್ಳದು ಮಾಡುತ್ತಾ ಕೇಳ್ನೆ

ಹೆಚ್ಚಿಗೆ ಮಾರ್ಕ್ ಕೊಡುಂತಾ ಕೇಳ್ತಿಲೆ
ಲಾಯಿಕ್ ಓದಿ ಬರೆವ ಮನ್ಸ್ ಕೊಡು

ಮಾಳಿಗೆ ಮನೆ ದುಡ್ಡು ನಾ ಕೇಳ್ತಿಲೆ
ನೆಮ್ಮದಿಲಿ ಬದ್ಕು ನಡೆಸಿಕೆ ದಾರಿ ಮಾಡು

ಬಗೆ ಬಗೆ ಊಟ ಬಟ್ಟೆ ಕೊಡುತ್ತಾ ಕೇಳ್‌ತ್ತಿಲೆ
ಎಲ್ಲಾವುಕ್ಕೂ ಗಂಜಿ ಸಿಕ್ಕವ ಹಾಂಗೇ ಮಾಡು

ಗುಡ್ಡೆಲಿ ಮೊನ್ಸರ ಕಾರುಬಾರು ಕಮ್ಮಿ ಮಾಡ್ಸ್
ಒಳ್ಳೇ ನೀರ್, ಗಾಳಿ, ಬೆಳ್ಕ್ ಕೊಡು

ನಂಗೆ ಎಲ್ಲಾ ಬೇಕುತ್ತಾ ಹೇಳ್ವ ಸ್ವಾರ್ಥನ ಸಾಕ್‌ಮಾಡ್ಸ್
ಇದ್ದದರ ಪಾಲು ಮಾಡಿ ತಿಂಬಕೆ ಕಲ್ಸ್

ನನ್ನ ಕೇಳಿಕೆ ಯಾರಿಗೂ ಕೇಳ್‌ದಿಲ್ಲೆ, ಬೇಕಾಗಿಲ್ಲೆ
ಈಗ ನೀವು ಹೇಳಿ, ನಾ ಸ್ವಾರ್ಥಿನಾ.....?
ಮತ್ತೇ ನೀವೂ.....?

# ಗೂಡೆನ ನೆನ್ಪು

ಮಾತಾಡಿಕೆ ಗುಡ್ಡೆಗೆ ನೀ ಕರ್‌ದಳ
ಕಲ್‌ಲಿ ಕಲ್ಲ್‌ನಂಗೆ ಕುದ್ದಳ
ಮಾತ್‌ನ ಮನ್ಸ್‌ಲಿ ಕಟ್ಟಿಕಂಬಡ
ನಾ ನಿನ್ನ ಮದುವೆ ಆವ ಗಂಡ್
ಒಪಿಗೆ ಉಟ್ಗೊ ಇಲ್ಲೆನಯಾ

ನಿನ್ನ ಹೂನೆಗೆ ಬಾಂಡಿ ಹೋಗುಟ್ಟು
ನಮ್ಮ ನೊಡುಲಿ ಎಂತ ಅಡ್ಡ
ಅಯ್ಯೆನ ಚರಿಪಿರಿ ಕೇಳ್‌ಬಡ
ಅಪ್ಪನ ದರ್‌ಬಾರ್ ಗೆ ಮೊಣ್ಣು
ನಿಂಗೆ ಉಣಿಸಿ ನಾ ಉಂಬೆಯಾ

ಮಿಣುಕುವ ಲಂಗಲಿ ನೀ ಪೋರ್ಲುಗ ಕಂಡಿಗ
ಬೇಡಾದ್ ಯಾರೋ ನಿನ್ನ ಕೆಬಿಲ್ಲಿ ಉರುಗಿಯೊಳ್ಳೊ
ನಾವಿಬ್ಬೊರು ತೊಬ್ಬಿಕಂಕೆ ಉಟ್ಟು
ಕಾಲ್‌ಬೆರಳ್‌ಲ್ಲಿ ಚಿತ್ರ ಬುಡ್ಸುಬಡ
ಮುಸುಂಡುನ ಏಡುನಂಗೆ ತಿರ್‍ಗ್ಗುಸುಬಡಯಾ

ಶಾಲೆಗೆ ಹೊರ್‌ಟ ನಾವು ಗುಡ್ಡೆಲ್ಲಿ ಒಳೊ
ನಿಂಗೆ ಎಂತ ಮಾರಿ ಬೊಡ್ದುಟ್ಟು
ಹೊತ್ತು ಕತ್ತಲಾತ್ ಶಾಲೆ ಬುಡಿಕಾತ್
ಮೆಯೆಕೆ ಹೋದ ದನಗ ಬಾಕತ್
ಗಾಳಿ ಬೀಸಿದೆ ಮಳೆ ಹನ್‌ಕಿದ್ದೆಯಾ

ತೊಬ್ಬಿ ಹಿಡ್ದು ನೀ ಮುತ್ತು ಕೊಟ್ಟಳಾ
ನನ್ನೆರಡು ಕಣ್ಣು ಮುಚ್ಚಿತ್ತುಯಾ
ಪರಪರ ದರುಗುಲ್ಲಿ ನೀ ಓಡ್ಯಳಾ
ನಿನ್ನ ಹಿಂದೆಲ್ಲಿ ನಾ ಮನೆ ಸೇರ್ದೆ
ನಿನ್ನ ನೆನ್ಪು ನಂಗೆ ಯಾಗೊಳು ಉಟ್ಟುಯಾ

# ಅಕ್ಕನ ಮೊದುವೆಲಿ

ಅಪ್ಪ ತೀರಿ ಹೋಗಿ ವರ್ಷ ಒಂದಾತ್‌ಲೆ
ಅಕ್ಕನ ಮೊದುವೆ ಮಾಡಿರೆ ಒಳ್ಳೆದ್‌ತ
ಕುಟುಂಬದೊವು ನೆಂಟ್ರ್‌ಗ ಮಾತಡ್ತಿದ್ದೊ
ಅಮ್ಮ ಉಸರ್ ಇದ್ದೊ ಅಷ್ಟೇ ಯಾಕೆ
ಅಪ್ಪನ ಅಮ್ಮನೂ ಮೊದ್ದು ಮರ ಇಲ್ಲದೇ
ವರ್ಷ ನೂರಾದರೂ ಗುಂಡು ಕಲ್ಲಿನಂಗಿದ್ದೋ
ಅಕ್ಕಂಗೆ ಮನ್ಸ್ ಇಲ್ಲದಿದ್ರೂ ಶಾಲೆ ಮುಗ್ಸಿವೆ
ಗಂಡ್‌ನ ಕಡೆವು ಬಾತಿದೊ ಹೋತಿದೋ
ಆ ದಿನ ಶಾಲೆಗೆ ರಜೆ ಇತ್ತ್
ಅಮ್ಮ ಅಟ್ಟಂದ ಚೊಂಬು ಬಟ್ಲು ತೆಗೆತಿದ್ದೋ
ಮೊಸಿ ನೊರ್‌ವೊಳ್ಳುಲಿ ತಿಕ್ಕಿ ತೊಳೆತ್ತಿದ್ದೋ
ಇದರೆಲ್ಲಾ ನೋಡ್ದ ತಮ್ಮ ಕೇಳಿಟು ನೆಂಟ್ರು ಬಂದವೆನಾ
ಉಗ್ಗಪ್ಪ ಹೇಳ್ದ್ ಕೇಳ್ತ್‌ಲೆನಾ
ಅಕ್ಕನ ನೋಡಿಕೆ ನೆಂಟ್ರು ಬಂದವೇತಾ ಹೇಳ್ದಲ್ಲಾ
ಪಟ್ಟೆನೂಲಿಗೆ ಸಿಕಿಸಿಕಣ್ ಇದ್ದ ಚೆಡ್ಡಿನ
ಓಡ್ದ ತಮ್ಮ ಶಾಲೆಲಿ ಸಿಕ್ಕಿದ ಚಡ್ಡಿನ ಹಾಕಿದೆ
ನೆಂಟ್ರ್ ಮೆಟ್ಟಲಿಲಿ ಇಳ್‌ಕಂಡ್ ಬಂದವೆ
ಅಕ್ಕ ಆಚೆಮನೆ ಅತ್ತೆನ ಸೀರೆ ಉಟ್ಟಿತ್ತು
ಅಡಿಲಿ ಅಮ್ಮನ ಲಂಗ ಕಾಂಬೋತ್ತಿತ್
ಅಕ್ಕ ನಿಂಬುಳಿ ಸರ್‍ಬೊತ್ತು ಹಿಡಿಕಣ್ ಬಾತ್
ಕಾಯಿ ಬೆಲ್ಲಲಿ ಕಲ್ಸಿದ ಅವ್ಲಕ್ಕಿ ಒಟ್ಟಿಗಿತ್ತ್
ಸರ್‌ಬೊತ್ ಮಾಡ್‌ದ ನಿಂಬುಳಿ ತೊಪ್ಪೆ ತಮ್ಮನ ಬಾಯಿಲಿತ್ತ್
ಮೊದುವೆ ನಿಗಂಟು ಮಾಡುವೆ
ಚಪ್ಪರ ಹಾಕಿ ಸೆಗುಣಿ ಗುಡುಸುವೆ
ಮೊದುವೆ ದಿನ ಹಕ್ಕಲೆ ಬಾತುಟ್ಟು
ಯಾಕೆ ಗೊತ್ತುಲೆ ಅವ್ವಂಗೆ ಚೂರು ಉಸಾರಿಲ್ಲೆ
ಇನ್ನು ಹಿಂಗೆ ಅರ್ಲೊ ಮೊರ್ಲೊ
ಚೂರು ತಿಳದೋವು ಹೇಳ್ತಿದ್ದೊ
ನಾಳೆ ಮೊದುರಂಗಿ ನೆಂಟ್ರು ಬಂದೊಳೊ
ಅವ್ವ ನೊಡುವೊಳಗೆ ಕೋಣೆಲಿ ಮಲಗಿಯೊಳೊ

ಯಾರ್ನು ಗುರ್ತು ಸಿಕ್ಕುದುಲೇತ ಹೇಳ್‌ತ್ತಿದ್ದೋ
ಕಾರ್ನೂರಿಗೆ ಇಸಿದ ಕೋಳಿ ಗೈಪುಲಿ ಅವ್ವ ಉಂಡಿದೊ
ಮದ್‌ರಂಗಿ ಅಡ್ಗೆ ಆಗಿತ್ತ್ ನೆಂಟ್ರು ಸೇರಿದ್ದೊ
ಬೊಳ್ಪುಗೆ ಚಾಯ ಕೊಡಿಕೆ ಕರ್ದವೆ
ಚೂರು ಕುಡ್ದು ಕುಡೆದುಲೆತಾ ಅಮ್ಮ ಹೇಳುವೆ
ದೊಡ್ಡಪ್ಪ ನೋಡಿ ಹೇಳುವೆ
ಅವ್ವನ ಆಯಿಸ ಮುಗ್‌ತ್‌ತ್ತ,
ಅಪುರೂಪದ ನೆಂಟ್ರ್‌ಗ ಅಂದ್ ಮನೆಲಿದ್ದೊ
ಎಲ್ಲರ ಎದುರು ಅವ್ವ ಜಿವಬುಟ್ಟೊ
ಅಕ್ಕನ ಮೊದುವೆ ನಿತ್ತೋತು
ಬಾವ ಬಂದೊವು ಹೆಳುವೆ
ಅವ್ವನ ಕಾರ್ಯ ಮುಗೆಲಿ ಮೊದುವೆ ಆನೆತ
ಅವ್ವಂಗೆ ಒಳ್ಳ ಸಾವು ಬಾತ್
ಅಕ್ಕನ ಮೊದುವೆನೂ ಪೊರ್ಲುಲಿ ಆತ್

## ಮೊನ್ಸಾನ ಮನ್ಸ್

ಪೊಲ್ಲುರ್ ಬಣ್ಣಲಿ ಏನ್ನೂಟ್ಟು ಬಿಳ್‌ಗ್‌ಲ್
ಇರುದೆಲ್ಲಾ ಮೊನ್ಸಾನ ಮನ್ಸ್‌ನೊಳಗೆ
ಇರುದೆಲ್ಲಾ ಮೊನ್ಸಾನ ಮನ್ಸ್‌ನೊಳಗೆ

ದನ ನೋಡು ಕಪ್ಪುಟ್ಟು
ಹಾಲು ನೋಡು ಬಿಳಿ ಉಟ್ಟು
ಕುಡೆದಲೇನೆಯಾ ನೀ ಕುಡೆದುಲೇನೆಯಾ

ಕೋಗಿಲೆ ನೋಡಿಕೆ ಕಪ್ಪುಟ್ಟು
ಮಾರ್ದಟ ಕೇಳು ಲಾಯ್ಕುಟ್ಟು
ಕೇಳ್‌ದುಲೆನಯಾ ನೀ ಕೇಳ್‌ದುಲೆನಯಾ

ಜೇನ್ನೆಳ ಕಚ್ಚಿರೆ ಬೇನೆಲುಟ್ಟು
ಜೇನೆರಿ ಎಷ್ಟು ಸಿಯಿ ಉಟ್ಟು
ತಿಂಬೊದುಲೇನೆಯಾ ನೀ ತಿಂಬೊದುಲೇನೆಯಾ

ನಾಯಿಗ ಕಳ್ಳಗಳಿಗೆ ಕಚ್ಚಿಕೆ ಹೋದವೆ
ತಿಂಬಕೆ ಹಾಕಿದವಂಗೆ ನೆಗಡಿ ಬೀಲ ಬೀಸಿದೆ
ನಾಯಿನಮನ್ಸ್ ಮೊನ್ಸಂಗೆಲ್ಲುಟ್ಟುಯಾ

ಮೊನ್ಸಾನ ಮನ್ಸು ಮೈದಾನ ಆಗಿರೊಕು
ಮನುಷ್ಯತ್ವ ತುಂಬಿ ಮೊಗೆತಿರೊಕು
ಮನುಷ್ಯತ್ವ ತುಂಬಿ ಮೊಗೆತಿರೊಕು

ಮೋರೆ ದುಡ್ಡು ನೋಡಿ ಮೊನ್ಸಾನ ಅಳೆಕಾದುಲೆ
ಮೊನ್ಸಾನ ಮನ್ಸ್‌ಗೆ ಬೆಲೆ ಕಟ್ಟಿಕಾದುಲೆ
ಮೊನ್ಸಾನ ಮನ್ಸ್‌ಗೆ ಬೆಲೆ ಕಟ್ಟಿಕಾದುಲೆ

## ಹಳ್ಳಿ ಹೈದ ಶಾಲೆಗೆ ಹೋಗಿ ಬಾಕನ

ಆಚೆಮನೆ ಎಂಕಪ್ಪಣ್ಣನ ಮಂಜ
ನೋಡಿಕೂ ಲಾಯಿಕ್ ಇತ್ತ್
ಕಲೆಕ್ಕೂ ಉಸಾರಿತ್ತ್ ಅವಂಗೊಂದು ತಂಗೆನೂ ಇತ್ತ್
ತಲೆಗೆ ಎಣ್ಣೆ ಹಾಕಿ ಕೆಂಪು ರಿಬ್ಬಾನ್‌ಲಿ ಬಿಗ್ದು ಕಟ್ಟುತ್ತಿತ್ತು
ಉದ್ದಲಂಗ ರೊವುಕೆ ನಿತ್ಯ ಹಾಕ್ತಿತ್ತು
ಮನೆಲಿ ಚೂರು ಬಡಸ್ತಿಕೆ ಇತ್ತ್
ಇವರ ಅಪ್ಪ ಅಮ್ಮ ದನಿನಲ್ಲಿ ಕೆಲ್ಸ ಮಾಡ್ತಿದ್ದೊ
ಗೂಡೆ ಶಾಲೆಬುಟ್ಟು ಮನೆಲಿ ಒಳ್‌ದಿತ್ತ್.
ದನಿಯವ್ಕೆ ಬೇಕಷ್ಟ್ ಆಸ್ತಿಇತ್ತ್.
ಆದರೆ ಅವುಕೆ ಒಬ್ಬನೇ ಮಂಜ ಉಟ್ಟು.
ಜೀವಲ್ಲಿ ಪೊರ್ಲು ಇತ್ತ್ ಕಲೆಕೆ ಚೂರು ಹಿಂದೆ ಇತ್ತ್
ಇಬ್ಬೊರು ಮಕ್ಕಳಿಗೂ ಬಾರಿಜೋಸ್ತಿ ಇತ್ತ್
ಎಂಕಪ್ಪಣ್ಣನ ಮಂಜ ಜೋಸ್ತಿನೊಟ್ಟಿಗೆ
ಮನ್ಸ್ ಬಿಚ್ಚಿ ಮಾತಾಡ್ತಿತ್ತ್
ಹಸುಕರ್‌ನ ಸಂಬಂಧ ಅವರ್ದಾಗಿತ್ತ್
ಅವನ ಕನ್ಸ್ ಹಿಂಗಿತ್ತ್‌ಸಸ
ಲಾಯಿಕ್ ಕಲೆಕ್ಕು ದೊಡ್ಡ ಕೆಲ್ಸಕ್ಕೆ ಸೇರೊಕು
ತಂಗೆಗೆ ಒಳ್ಳೆ ಗಂಡನ ಹುಡುಕಿ
ಗಡ್ದ್‌ಲಿ ಮೊದುವೆ ಮಾಡೋಕು
ಅಪ್ಪ ಅಮ್ಮನ ಲಾಯಿಕ್ ನೋಡೋಕು
ಬಣ್ಣದ ಆಸೆಗ ಅವನ ಮೈಮನ್ಸ್ ತುಂಬಿತ್ತು
ದನಿನ ಮಂಜನ ದೂರದ ಪೇಟೆಲಿ ಶಾಲೆಗೆ ಹಾಕುವೆ
ಜೋಸ್ತಿ ಬಂದರೆ ಶಾಲೆಗೆ ಹೋನೆತ ರಾಗ ಎಳ್ದದೆ.
ಪಾಪ ಇವಂಗೆ ಅಲ್ಲಿ ಓದುವಷ್ಟ್ ದುಡ್ಡು ಇಲ್ಲೆ
ದನಿ ಮನ್ಸ್‌ಇಲ್ಲದ ಮನ್ಸ್‌ಲಿ ಅವಂಗೂ ದುಡ್ಡು ಕೊಟ್ಟವೆ
ಇಬ್ಬರಿಗೂ ಪೇಟೆ ಬದ್ಕ್ ಹಿಡ್ಸಿತ್ತ್
ಧನಿನ ಮಂಜಂಗೆ ಇವ ತಲೆಗೆ ಕುಟ್ಟಿ ಹೇಳ್‌ತಿತ್ತ್
ಧನಿನಲ್ಲಿ ಇವರ ಅಪ್ಪ ಅಮ್ಮ ಗೈಯೊತ್ತಿದ್ದೊ
ಈ ವರ್ಷಕ್ಕೆ ಶಾಲೆ ಮುಗ್ತ್ ರಜೆನೂ ಸಿಕ್ಕಿತ್
ಊರಿಗೆ ಬಂದವೇತಾ ಮನೆಗೆ ಸುದ್ದಿ ಮುಟ್ಟಿತ್ತ್
ಬೆಸೆಗೆಲಿ ಕಾಡ್ ಹಂದಿ ಉಪ್ಪಣ ಒಣಗ್ತಿತ್ತ್
ದನಿನಲ್ಲಿ ಕೋಳಿಗೈಪು ಪಾಯಿಸ ಕೊದೆತ್ತಿತ್ತ್

ಇವು ಬಾಕನ ಕಣ್ಣ್‌ಗೆ ಕತ್ತಲೆ ಆವುಟು
ಎಂಕಪ್ಪಣ್ಣನ ಮಗ್ಳು ತಿಂಗೊಳು ಬೆಳ್ಕುಲಿ ಕಾದುಟು
ಅವರ ಕೈಲಿದ್ದ ಚೀಲನ ಇವಳೇ ಹಿಡ್ದಿತ್ತ್
ಇನ್ನೊಂದು ಕೈಲಿ ದೊಂದಿನೂ ಇತ್ತ್
ಮನೆಲಿ ಬಾರಿ ಗೌಜಿ ಗಮ್ಮತ್ತ್ ತುಂಬಿತ್ತ್
ಎಂಕಪ್ಪಣ್ಣನ ಕುಟುಂಬದವು ಇಲ್ಲಿ ಸೇರಿತ್ತ್
ಯಜಮಾಂತಿ ಬಾಳೆ ಹಾಕಿ ಉಂಬಕ್ಕೆ ನೀರ್ ಕೊಟ್ಟಿತ್ತ್
ಅಟ್ಟಲಿ ಕದೊಳಿ ಬಾಳೆ ಹಣ್ಣ್ ನ ಗೊನೆ ನೇಲ್‌ತ್ತಿತ್ತ್
ಉಂಡು ಹಣ್ಣ್ ತಿಂಬೊದು ಅಭ್ಯಾಸ ಆಗಿತ್ತ್
ದನಿನ ಮಂಜನೇ ಗೊನೆಂದ ಹಣ್ಣ್ ತಗ್ದಿತ್ತ್
ಇಬ್ರೊಬ್ರು ತಿಂದ್ ಚೋಲಿ ಅಡಿಗೆರಕ್ಕೆ ಹಾಕಿದೊ
ನಾವು ಪೋಯಿತ ಎಂಕಪ್ಪಣ್ಣ ಹೊರ್‌ಪ್ಪಾಗಿತ್
ನಿಲ್ಲಿ ನಾಳೆ ನಾನೂ ಬನ್ನೆತ  ದನಿನ ಮಂಜ ಹೇಳ್ತ್
ಎಲ್ಲವು ಮಲ್ಗಿ ನಿದ್ದೆ ಕಣ್ಣಿಗೆ ಹತ್ತುವ ಹೊತ್ತಾತ್
ಎಂಕಪ್ಪಣ್ಣನ ಮಂಜ ಮಲಗಿದ್ದಲೇ ಹೊಣ್‌ಕಿದೆ
ಎದೆಬೇನೆ ಹೊಟ್ಟೆಬೇನೆತ ಏನೆಲ್ಲಾ ಹೇಳ್ದೆ
ಎಲ್ಲವು ಎದ್ದವೆ ಚಿಮುಣಿ ದೀಪ ಹೊತ್ತುಸುವೆ
ಪಂಡಿತರಿಗೆ ಕೂಕುಳು ಹಾಕಿ ಕರ್ಕಂಡ್ ಬಂದವೆ
ನಿದ್ದೆ ಕಣ್ಣ್‌ಲಿ ಕಣ್ಣ್ ಬುಟ್ಟುಕಂಡ್ ಪಂಡಿತರು ಬಂದವೆ
ಅವನ ಮುಟ್ಟಿ ಕಣ್ಣ್‌ಮುಚ್ಚಿ ಹೊರೆಗೆ ಬಂದವೆ
ದನಿನ ಕರ್ದ್ ಇದ್ ಹೋವುಟುತ ಹೇಳಿ ಹೊರ್‌ಟವೆ
ಗಂಜಿ ಗೈಪುನ ಅಳೆಗೆ ನೋಡುವೆ
ಬಾಳೆಣ್ಣು ಸಿಗುಳಿ ಏನೋ ಹಾಕಿದು ಕಂಡದೆ
ದನಿಗ ಎಂಕಪ್ಪಣ್ಣನ ಕರ್‌ದ್ ಕೇಳುವೆ
ಓದೇವುರೇ.. ಅದ್ ಹೆಗ್ಗಣಕ್ಕೆ ಇಸಿಕೆತ್ತಾ
ಎರ್ಡ್ ಹಣ್ಣಿಗೆ ಮೊದ್ದು ಹಾಕಿದ್ ಅದನ್ನೇ ಅವ ತಿಂತ.!!!
ನನ್ನಂದಾಗಿ ನನ್ನ ಮಂಜ ಹೋತ್‌ತ
ಸಾಣಿ ತಲೆನ ಗೋಡೆಗೆ ಗುದ್ದಿಕಂಡವೆ
ದನಿನ ಮಂಜ ಎಲ್ಲಾರ ಕಣ್ಣೀರ್ ಒರ್ಸಿದೆ
ಜೋಸ್ತಿನ ಆಸೆನ ಸುಳ್ಳು ಮಾಡ್ದುಲೆತಾ
ಮಮನ್ಸ್‌ನ ಕಲ್ಲ್ ಮಾಡಿ ಅಪ್ಪನ ಒಪ್ಪಿಸಿಕಂದೆ
ಜೋಸ್ತಿನ ತಂಗೆನ ಅವನೇ ಗೌಜಿಲಿ ಮದ್ವೆ ಆದೆ
ಎರ್‌ಡು ಅಪ್ಪ ಅಮ್ಮನ ಮನೆಲಿ ಲಾಯಿಕ್ ನೋಡಿಕಂದೆ
ಈ ಗಂಡು ಹೆಣ್ಣ್‌ಗೆ ಒಂದು ಕೂಸುನೂ ಹುಟ್ಟಿದೆ
ತೀರಿ ಹೋದವನ ಹೆಸ್ರ್‌ಲಿ ಮನೆ ತುಂಬಾ ಓಡಾಡ್ದೆ.

## ಮೊದು ಮಂಜ

ಬೊದಿ ಬಂಗಾರನ ಗ್ಯಾನ ಮಾಡಿಕಾಗದ್
ಕಾರು ಬಂಗಲೆನ ಕೇಳಿಕಾಗದ್
ಸಾಲ ಮಾಡಿ ಮೊದುವೆ ಆಕೆ ಆಗದ್
ಹೆಂಣ್ ಗೆ ಲೊಟ್ಟೆ ಹೇಳಿಕಾಗದ್
ಹೆಂಣ್‌ಗೆ ಗಂಡ ಬೈಯಕಾಗದ್
ಗಂಡ ಹೆಂಡನ ಹೀರ್ಕಂಡ್ ಬೊಡೆಕಾಗದ್
ಕಂಡವರೊಟ್ಟಿಗೆ ಹೆಂಣ್‌ನ ಹೊಗುಳಿಕಾಗದ್
ಊರಿಡೀ ಹೆಂಣ್‌ನ ದೂರಿಕಾಗದ್
ಹೆಂಣ್ ಗೆ ಅಪವಾದ ಹೇಳಿಕಾಗದ್
ಬೇರೆ ಹೆಂಣ್‌ನ ಸಹವಾಸ ಮಾಡಿಕಾಗದ್
ಅವಗಢಕ್ಕೆ ಹೆಂಣ್‌ನ ಹಂಗುಸಿಕ್ಕಾಗದ್
ಇದ್ದದರ ಒಟ್ಟಿಗೆ ಉಂಬಕ್ಕೆ ಮರೆಕಾಗದ್
ಪೊರ್ಲುನ ನೋಡಿ ಮರ್ಲು ಆಕೆ ಆಗದ್
ನಂಬಿದವರ ಕೈ ಬುಡಿಕಾಗದ್

# ಕಾಡ್ ಮನ್ಸ್

ಊರು ಊರಾಗಿರೋಕು
ಕಾಡ್ ಕಾಡಾಗಿ ಬೆಳೆಕೂ
ಊರು ಕಾಡ್‌ನ ನಡುಲೊಂದು ಬೇಲಿ ಇರೊಕು
ಕಾಡ್‌ಲ್ಲಿ ಮೊನ್ಸರ ಕಾರ್‌ಬಾರ ಕಮ್ಮಿ ಮಾಡೊಕು
ಆಗ ಊರುಲಿ ಕಾಡ್‌ನವರ ಉಪದ್ರ ಕಮ್ಮಿ ಮಾಡುವೆ
ಕಾಡ್ಲ್ ಪರಿಮಳದ ಹೂ ದೈಗಳ ನೆಡೊಕು
ಗಿಳಿಗುಬ್ಬಿ ಜೇನು ದುಂಬಿಗಳಿಗೆ ತಿಂಬಕೆ ಆಕು
ಮರಗಳಲ್ಲಿ ಗುಬ್ಬಿ ಕಕ್ಕೆ ಚವ್ಳಿ ಗೂಡು ಇರೊಕ್ಕು
ಹೆಬ್ಬಲ್ಸು ಬೆದುರ್ ಮಾಯಿನ ಮರ ಬೆಳ್ಸೊಕು
ಹಂದಿ ಕಡವೆ ಆನೆಗಳಿಗೆ ತಿಂಬಕೆ ಬೇಕು
ಗೊಟ್ಟೆ ಚೂರಿ ನೇರಳೆನ ಕಡೆದೆ ಬುಡೊಕು
ಕಾಡ್‌ನೊವು ಹೊಟ್ಟೆ ತುಂಬಾ ತಿಂದ್ ಆಟಾಡೊಕು
ಮಂತ್‌ಹುಳಿ, ಉಂಡೆಹುಳಿ ಕಾನಕಜ್ಜೆ ಕೊಯದೆ ಬುಡೊಕು
ಕಾಡ್‌ಸೊತ್ತುನ ಊರ್‌ನೊವು ಮಾರುದ್ ನಿಲ್ಸೋಕು
ಕಾಡ್ ತಿಂದ್ ಬುಟ್ಟದರ ಊರುನೊವು ಹೆರ್‌ಕೊಕ್ಕು
ಕಾಡ್‌ಕೋಳಿ, ಹೊಟ್ಟ ತೆಕ್ಕಟೆ ಹಾರ್‌ತ್ತಿರೋಕು
ಎಲಿ ಹೆಗ್ಗಣ ಮೊಲ ಹಾವೂಗ ಕಾಂಬತಿರೋಕು
ಹುಳ, ಪಿಜಿನ್, ಚಿಟ್ಟೆಗಳ ತವರ್ ಅಲ್ಲುಟ್ಟು
ಊರ್‌ನೊವು ನೋಡಿ ಮನ್ಸ್‌ಲಿ ಖುಶಿ ಪಡೊಕು
ಕಾಡ್‌ನ ಕಾಡ್ ಮನ್ಸ್‌ನ ಗ್ರೇಸಿಕಂಡ್
ಮುರ್ಗ ಹಕ್ಕಿಗಳ ಒಡನಾಟಲಿ ಮೊನ್ಸ ಬೊದ್ಕೊಕು
ಕಾಡ್‌ಲ್ಲಿ ಕುಡೆಕೆ ನೀರ್‌ನ ಗುಂಡಿ ತೆಗೆಕ್ಕು
ಕಾಡ್‌ಲ್ಲಿ ಮೊದ್ದು ಗುಂಡುನ ನಿಲ್ಸಿ ಬುಡೊಕು
ಊರುನವು ಕಾಡ್‌ನೊಳಗೆ ಹೊರ್‌ಟ್ ಅವುಟ್
ಕಾಡ್‌ನೊವು ಊರಿಗೂ ಬಂದಾವುಟ್
ಕಾಡ್ಲಿ ಕಾಡ್ ಬೆಳ್ಸುವ ಕಾರ್ಯ ನಡೆಕ್ಕು
ಕಾಡ್ಲ್ ಕಿಚ್ಚಿ ಹಾಕದೆ ಕಾಡ್ ಉಳಿಸೋಕು
ಊರು ಕಾಡ್‌ಗೆ ಕಾಡ್ ಊರುಗೆ ಆಕೆ ಬೊತ್ತು
ಮನ್ಸಿಂದ್ದಾಂಗೆ ಕಾಡ್ ಬೆಳೆತಾ ಇರೊಕು
ಊರ್ ಊರಾಗಿರೋಕು
ಕಾಡ್ ಕಾಡಾಗಿ ಬೆಳೆಕೂ
ಊರ್ ಕಾಡ್‌ನ ನೊಡುಲೊಂದು ಬೇಲಿ ಇರೊಕು

## ಬುಟ್ಟು ಹೋದವನ ನೆನ್ಪುಲಿ

ಇನ್ನೊಮ್ಮೆ ಹುಟ್ಟಿ ಬಾ ನೀ
ನನ್ನೊಳಗೆ ಹುಟ್ಟಿ ಬಾ

ನನ್ನ ಬಾಡ್ದ್ ಮೋರೆನ
ಅರ್ಲ್‌ಸ್ ಬಾ

ನನ್ನೊಳಗೆ ನಿನ್ನ ನೆನಪುನ
ಜುವ ಆಗಿ ಬಾ

ನಮ್ಮಿಬ್ಬರ ಮಾತ್‌ನ  ಮನೆನ
ಕಟ್ಟೋಮು ಬಾ

ನನ್ನ ನೋಡಿ ನೆಗಾಡವುಕ್ಕೆ
ಉತ್ತರ ಆಗಿ ಬಾ

ಕಲ್ಲಾದ ನ್ನ ಮನ್ಸ್‌ನ
ಕರ್‌ಗ್‌ಸು ಬಾ

ನೊಂದ ಈ ಜೀವಕ್ಕೆ
ಜೀವಕಳೆ ಆಗಿ ಬಾ

# ಊರುಗೌಡ

ಊರಿಗೊಬ್ಬ ಊರ್‌ಗೌಡ ಬೇಕ್
ಎಲಾಡಿಕೆ ಮರ್ಯಾದಿ ಅವುಕೆ ಕೊಡೊಕು
ಕರೆಕನ ಅವ ಬಾಂವ ಆಕು
ಹಾಲ್ ನ ಮನ್ಸ್ ಅವಂದಾಗಿರೋಕು
ಕೈ ಮುಗ್ದ್‌ದು ಹೇಳಿಕೊಂಕು
'ಗೌಡ ವೀಳ್ಯ' ಮರ್ಯಾದಿ ಅವ್ಕೆ ಕೊಡೊಕು
ಸಂಸ್ಕೃತಿ, ಸಂಪ್ರದಾಯ ಉಳ್ಸಿ ಬೆಳ್ಸೊಕು
ಸುಖ: ದು:ಖಕ್ಕೆ ಹೆಗ್‌ಲ್ ಕೊಡೊಕು
ಸಣ್ಣವ-ದೊಡ್ಡವ ಬೇಧ ಇರಿಕೆ ಬೊತ್ತ್
ಊರಿಗೆ ಒಂದೇ ನಿಯಮ ಆಗಿರೋಕು
ಬೇಡಾದ ಖರ್ಚಿನ ಕಡಿಮೆ ಮಾಡೋಕು
ಅನಿಷ್ಟ ಪದ್ದತಿನ ನಿಲ್ಸಿ ಬುಡೋಕು
ಮೂಲನಂಬಿಕೆನ ಜನಕ್ಕೆ ತಿಳ್ಸಿ ಹೇಳೊಕು
ಊರುಲ್ಲಿ ನಡೆವ ಅನ್ಯಾಯನ ತಡೆಹಿಡೆಕು
ಒಳ್ಳ ಕೆಲ್ಸಕ್ಕೆ ಬೆಂಬಲ ಕೊಡ್ತಿರೋಕು
ಇವರ ನಾವು ಊರು ಗೌಡಾಂತ ಕರೆಕು

## ಸುರೂನ ಜಡಿಕುಟ ಮಳೆ

ಮೊಗ್ಗು ಹೋತ್ ಬೇಸೆಗೆ ಹಿಡ್ತ್
ಕಾದ್ ಮೊಣ್ಣುನ ಸೆಕೆ ನೆತ್ತಿಗೇರಿತ್ತ್
ಪಚ್ಚೆ ಹುಲ್ಲೂ ಒಣಗಿತ್ತ್
ಒರ್ತೆ ಕಟ್ಟೆ ನೀರ್ ಆರಿತ್ತ್
ಕುಡೆವ ನೀರ್‌ಗೂ ಪರ್‌ದಾಟ ಸುರಾವುಟ್ಟು
ದೈವಗಳಿಗೆ ಹರ್‌ಕೆ ಹೇಳಿ ಆವುಟ್ಟು
ದೇವ್ರುಗಳಿಗೆ ಬೆಂಡನ ಒಪ್ಪುಸಿ ಆವುಟ್ಟು
ಎತ್ತುಗಳ ಹೊರ್ಡುಸಿ ಪೂಜೆನೂ ನಡ್‌ದ್ತ್
ನಟ್ಟ ಮದ್ಯಾನ ಕತ್ತಲೆ ಅವುಟ್ಟು
ಗುಡ್ಗು ಮಿಂಚ್ ಜೋರತ್
ಗಾಳಿನೊಟ್ಟಿಗೆ ಮಳೆನೂ ಹನ್‌ಕಿತ್ತ್
ಒಣ್‌ಗಿಲ್ ಮೊಣ್ಣುನ ಪರಿಮಳ ಹೊರ್ಟಿತ್ತ್
ಮೋಟೆಲಿದ್ದ ಕಪ್ಪೆಗಳ ಕೂಂಗುನೂ ಜೋರಾತ್
ಕೊಮ್ಮಲಿದ್ದ ಗೋಟು ಅಡ್ಕೆಗ ಅಡಿಲಿತ್ತ್
ಉರ್‌ಕೊಳ್ಳಿ ಮಕ್ಕ ಮಾಯಿನ ಮರದ ಬುಡೊಲಿದ್ದ
ಮೀನ್ ಎಸ್‌ಂಡ್ ಉಬೊರ್ ಹತ್ತಿದ್ದೊ
ಕಾಯಿ ಹಿಡೆಕೆ ಜನ ಹಳ್ಳದ ಕರೆಲಿದ್ದೊ
ತುಂಬಿದ ಮರಗ ಮಳೆಗೆ ತಲೆ ಬೊಗುಸಿದ್ದೊ
ಗುಡೆಲಿದ್ದ ದನಗ ಹಟ್ಟಿನೂ ಸೇರಿದ್ದೊ
ಕೊಟ್ಟೆ ಕೊಮ್ಮಗ ಮುರ್‌ದ್ ಬೀಳ್‌ತ್ತಿದ್ದೊ
ಬಾಂಡಿದ ಮರ ದೈಗ ಪಚ್ಚೆ ಪಚ್ಚೆ ನೆಗಡ್‌ತ್ತಿದ್ದೊ
ಕಿಚ್ಚಿಗೆ ಹಾಕಿದ ಬೀಜದ ಮೂರಿನೂ ಹೊರ್‌ಟಿತ್ತು
ಸುರೂನ ಮಳೆಲ್ಲಿ ಮೊನ್ನನ ಮೈ ಮನ್ಸ್ ಅರ್‌ಳಿತ್ತ್'

# ನಾಯಕರ್

ಹೊತ್ತಿಗೊಂದು ವೇಷ ಹಾಕುವ ನಟರ್ ನಾಯಕರಲ್ಲ
ದಪ್ಪ ದಪ್ಪ ಪುಸ್ತಕ ಬರ್ರೊದವು ನಾಯಕರಲ್ಲ
ಕಟ್ಟೆ ಲಿ ನಿತ್ತ್ ಬಾಯಿ ತುಂಬಾ ಮಾತಾಡವು ನಾಯಕರಲ್ಲ
ಸಾಲ್ ಉದ್ದ ಇದ್ದರೂ ಮುಂದೆ ನಿಲ್ಲೊವು ನಾಯಕರಲ್ಲ
ಕುಡೆಕೆ ತಿಂಬಕೆ ಕೊಡೊವು ನಾಯಕರಲ್ಲ
ಜನಗಳ ಬೆಡಿಗಳ ಎಡೆಲಿ ಬಾವುನ್ನು ನಾಯಕರಲ್ಲ
ಕಪ್ಪು ಕೋಟು ಹಕಿದೇವು ನಾಯಕರಲ್ಲ
ಬೆಳ್ಳನೆವು , ಬಳ್ಳಂಗೆ ಅಂಗಿ ಹಾಕೊವು ನಾಯಕರಲ್ಲ
ಅನಾಥರಿಗೆ ಮನೆ ಕಟ್ಟಿಸೊವು ನಾಯಕರ್
ವಿದ್ಯೆ ಬುದ್ಧಿ ಕಲ್ಸಿದೊವು ನಾಯಕರ್
ಮೊದ್ದು ಮಾಡಿ ಜುವ ಉಳ್ಸಿದೊವು ನಾಯಕರ್
ಬೇಲಿ ಕಾಯವ ಸೈನಿಕರ್ ನಾಯಕರ್
ಸ್ವಚಿಂತನೆ ಮರ್ತ್ ಪರಚಿಂತಕರ್ ನಾಯಕರ್
ತಿಂಬ ತಿನ್ಸುನ ಬೆಳ್ಸುವ ರೈತರ್ ನಾಯಕರ್
ಕುಡೆಕೆ ನೀರ್ ನಡೆಕೆ ದಾರಿ ಕೊಡೊವೆಲ್ಲಾ ನಾಯಕರ್

## ಹೆಸುರ್ ಉಸುರ್

ಎಲ್ಲಿ, ಯಾಗ, ಎಂತ ಗೊತ್ತಿಲ್ಲದೆ ಹುಟ್ಟುವೆ
ಕಷ್ಟನೋ ಸುಖನೋ ಬೊದ್ಕು ನಡ್ಸುವೆ
ಇಂದಲ್ಲಾ ನಾಳೆ ಸಾಯೆದು ತಿಳಿದಿರುವ ಸಂಗತಿ
ಮೊಣ್ಣುಲಿ ಹುಟ್ಟಿದ ಎಲ್ಲದರ ಕಥೆ ಇದ್

ಯಾರು ಯಾರಿಗೆ ಎಷ್ಟೆಷ್ಟು ಆಯಾಸು ಗೊತ್ತಿಲೆ
ತುಂಬಾ ವರ್ಷ ಬೊದ್ಕುದು ಸಾಧನೆನೂ ಅಲ್ಲ
ನೂರ್‌ದಿನ ಎಲಿಯಾಗಿ ಬೊದ್ಕುದಂದ
ಮೂರೇ ದಿನ ಹುಲಿಯಾಗಿ ಬೊದ್ಕೊಕು

ನಾವು ನಮ್ಮೊದುಂತ ಮನ್ಸ್‌ಲಿ ಗ್ರೇಸಿರೆ
ಲಾಡಾಯಿ ಬಾದುಲೆ, ತುಂಬು ಕುಟುಂಬ ಉಳ್ದ್ ಬಾಳ್ದೆ
ಉಸುರ್ ಅಳ್ದರೂ ಹೆಸುರ್ ಉಳ್ದ್ ಬಾಳ್ದೆ

## ಸ್ವರ್ಗ ನರ್ಕದ ನಡುಲಿ ಬೊದ್ಕು

ಪಾಲ್ ಮಾಡಿ ತಿಂಬೊದು ಸ್ವರ್ಗ
ಎಳ್ದ್ ತಿಂಬೊದು ನರ್ಕ
ಹಕ್ಕು ಮತ್ತೆ ಕರ್ತವ್ಯನೇ ಬೊದ್ಕು

# ಕೃತಜ್ಞತೆಗ...

- **ಹೆಚ್.ಬಿ. ಚಂದ್ರಶೇಖರ ಹೊಸೊಳಿಕೆ**
  ಸೂರ್ಯ ಎಂಟರ್‌ಪ್ರೈಸಸ್, ವೆಂಕಟರಮಣ ಟವರ್ಸ್, ಸುಳ್ಯ. ಮೊ.:9900890470
- **ಸನತ್ ಮುಳುಗಾಡು, ವಳಲಂಬೆ**
  ಯುವ ನ್ಯಾಯವಾದಿ, ಸುಳ್ಯ
- **ಶ್ರೀಕಾಂತ್ ಮಾವಿನಕಟ್ಟೆ**
  ಅಧ್ಯಕ್ಷರು, ಗೌಡ ತರುಣ ಘಟಕ, ಸುಳ್ಯ ತಾಲೂಕು
- **ದೇವಿಪ್ರಸಾದ್ ಚಿಕ್ಕುಳಿ**
  ಉದ್ಯಮಿಗಳು, ಗುತ್ತಿಗಾರು. ಮೊ.:9449664123
- **ಮೋನಪ್ಪ ಎನ್.ಕೆ. ನಾರಾಲು, ಜಟ್ಟಿಪಳ್ಳ**
  ಮಾಜಿ ಸೈನಿಕರು
- **ಅವಿನಾಶ್ ಕಡಪಳ**
  ಕಾರ್ಯದರ್ಶಿ, ಗ್ರಾಮ ಪಂಚಾಯತ್, ಕೊಡಿಯಾಲ
- **ಮುಕುಂದ ಕೊಡಪಾಲ**
  ಕೊಟ್ಟಾಯಂ ರಬ್ಬರ್ ನರ್ಸರಿ, ಎಲಿಮಲೆ. ಮೊ.:9945668107
- **ಜಯರಾಮ ಮುತ್ಲಾಜೆ, ಶ್ರೀಮತಿ ಉಷಾ ಜಯರಾಮ**
  **ಮಾ। ಜ್ಞಾನೇಶ್, ಮಾ। ಯಜ್ಞೇಶ್ – ಬಳ್ಳಕ**
- **ರವೀಂದ್ರ ಹೊಸೊಳಿಕೆ** – ಮಾಸ್ಟರ್ ಟೈಲರ್ಸ್, ಸುಳ್ಯ
- **ಗಂಗಾಧರ ಹೊಸೊಳಿಕೆ** – ಮಾಸ್ಟರ್ ಟೈಲರ್ಸ್, ಸುಬ್ರಹ್ಮಣ್ಯ
- **ಪದ್ಮನಾಭ ಬೀಡು**
  ಶ್ರೀ ಜಲದುರ್ಗಾದೇವಿ ಪ್ರಸನ್ನ ಅರ್ಥ್ ಮೂವರ್ಸ್, ಬೆಳ್ಳಾರೆ
  ಮೊ.: 9448019605
- **ಬಾಲಚಂದ್ರ ಕೊಡಪಾಲ**
  ಶ್ರೀ ಮೂಕಾಂಬಿಕ ವುಡ್ ಇಂಡಸ್ಟ್ರೀಸ್
  ಸಂಪಾಜೆ, ಕಲ್ಲುಗುಂಡಿ. ಮೊ.:7760192949
- **ಕುಶಾಲಪ್ಪ ಅಂಬೆಕಲ್ಲು** (ಪೈಸೇರಿ) ಮಡಪ್ಪಾಡಿ
- **ರಾಕೇಶ್ ಮುಳ್ಳುಬಾಗಿಲು**
  ಸ್ಕಂದ ಬಟಲಿಂಗ್ ಇಂಡಸ್ಟ್ರಿಸ್, ವಳಲಂಬೆ
- **ಹೆಚ್.ಕೆ. ಧನಂಜಯ ಹೊಸೊಳಿಕೆ,** ಕೇವಳ, ಮಡಪ್ಪಾಡಿ
- **ಚಂದ್ರಶೇಖರ ನರಿಯೂರು,** ಪುರ್ಲುಮಕ್ಕಿ – ವಳಲಂಬೆ



ಮಿತ್ರ ಯೋಗೀಶ ಹೊಸೊಳಿಕೆ ಅವರ ತಿಂಗೊಳ್ ಬೆಳಕ್ ಕವನಸಂಕಲನದ ಬಗ್ಗೆ ಎರಡು ಮಾತು ಬರೆಯಲು ಹೆಮ್ಮೆ ಪಡುತ್ತೇನೆ. ಯೋಗೀಶ ನನಗೆ ರೇಡಿಯೋ ಕೇಳುಗರಾಗಿ ಹತ್ತಿರವಾದವರು. ಗುತ್ತಿಗಾರಿನಿಂದ ದೂರದ ಮಡಿಕೇರಿ ಆಕಾಶವಾಣಿಗೆ ಬಂದು ಅವರು ಅರೆಭಾಷೆ ಕಾರ್ಯಕ್ರಮ ಕೊಟ್ಟವರು, ಕವಿತೆಗಳನ್ನು ಓದಿದವರು. ಅವರೊಳಗೊಬ್ಬ ಉತ್ತಮ ಕವಿಯಿದ್ದಾನೆ. ವಾಸ್ತವವಾದೀ ಚಿಂತಕನಿದ್ದಾನೆ. ಇಲ್ಲಿಯ ಕವನಗಳಲ್ಲಿ ಅದು ನಿಚ್ಚಳವಾಗಿ ಕಾಣಿಸಿದೆ. ಕವನಗಳನ್ನು ಓದುತ್ತ ಹೋದಂತೆ ಸುಳ್ಯ ಪರಿಸರದ ಗದ್ದೆ, ತೋಟ, ಬಯಲು, ಗುಡ್ಡ, ಪಕ್ಷಿಸಂಕುಲ, ಮದುವೆ, ಸಂಪ್ರದಾಯ, ನಂಬಿಕೆ ಆಧುನಿಕತೆ ಉಂಟು ಮಾಡಿರುವ ಪಲ್ಲಟ ಹೀಗೆ ಇಡೀ ಬದುಕಿನ ಗಂಧ ಘಮ ಘಮಿಸುತ್ತ ಮನಸ್ಸು ಪುಳಕಗೊಳ್ಳುತ್ತದೆ. ಕೆಲವೊಮ್ಮೆ ಮರುಕಪಡುತ್ತದೆ. ಕೃಷಿ ಬದುಕಿನ ಜೊತೆ ಕವಿ ಬೆಳೆಸಿಕೊಂಡ ಅವಿನಾಭಾವ ಸಂಬಂಧ ಇಲ್ಲಿಯ ಸಂವೇದನೆಗಳ ಮುಖ್ಯ ನೆಲೆ.

**ಸುಬ್ರಾಯ ಸಂಪಾಜೆ**
ಆಕಾಶವಾಣಿ ಮಡಿಕೇರಿ

ಕಿರಣ ರಂಗ ಅಧ್ಯಯನ ಸಂಸ್ಥೆ
ಗುತ್ತಿಗಾರು - 574218

ಬೆಲೆ ರೂ. 50